ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ

NIMMURU SUDDI

ಸಂಪಾದಕರು: ಸುಂದರ್

Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 216 RNI Number : KNKAN/25/A2770 16-08-2026 Sunday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :216 ರಾಯಚೂರು 16-08-2026 ರವಿವಾರ ಪುಟ 04 ಬೆಲೆ ರೂ.2/- ಮೊ:8660146563

80ನೇ ಸ್ವಾತಂತ್ರ್ಯ ದಿನಾಚರಣೆ: ಸಚಿವ ಡಾ.ಅಜಯ್ ಧರ್ಮಸಿಂಗ್‌ರಿಂದ ಧ್ವಜಾರೋಹಣ

ರಾಯಚೂರು,ಆ.15-

ರಾಯಚೂರು ಜಿಲ್ಲಾಡಳಿತದ ವತಿಯಿಂದ ಸ್ವಾತಂತ್ರ್ಯ ದಿನಾಚರಣೆ -2026ರ ಅಂಗವಾಗಿ ರಾಷ್ಟ್ರ ಧ್ವಜಾರೋಹಣ ಕಾರ್ಯಕ್ರಮವನ್ನು ನಗರದ ಮಹಾತ್ಮಾ ಗಾಂಧೀಜಿ ಜಿಲ್ಲಾ ಕ್ರೀಡಾಂಗಣದಲ್ಲಿ ಆಗಸ್ಟ್ 15ರ ಶನಿವಾರ ದಂದು ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ನಡೆಯಿತು.

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಡಾ.ಅಜಯ್ ಧರ್ಮಸಿಂಗ್ ಅವರು ರಾಷ್ಟ್ರ ಧ್ವಜಾರೋಹಣ ನೆರವೇರಿಸುವರು.






ಇದೇ ಸಂದರ್ಭದಲ್ಲಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಎ.ವಸಂತಕುಮಾರ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ, ಅಪರ ಜಿಲ್ಲಾಧಿಕಾರಿ ಶಿವಾನಂದ, ರಾಯಚೂರು ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್, ರಾಯಚೂರು ತಹಶೀಲ್ದಾರ್ ಸುರೇಶ ವರ್ಮಾ ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಿಬ್ಬಂದಿಗಳು, ಹೋರಾಟಗಾರರು, ವಿದ್ಯಾರ್ಥಿಗಳು, ಸಾಹಿತಿಗಳು ಇದ್ದರು.

ರೈತರಿಗೆ ಪರಿಹಾರ ಒದಗಿಸಲು ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ: ಸಣ್ಣ ನೀರಾವರಿ ಸಚಿವ ಡಾ.ಅಜಯ್ ಧರ್ಮಸಿಂಗ್

ರಾಯಚೂರು ಆ.16-

ರಾಜ್ಯ ಸರ್ಕಾರವು ರೈತರ ಪರವಾಗಿದೆ. ಅವರಿಗೆ ಅನುಕೂಲವಾಗುವ ಕೆಲಸ ಕಾರ್ಯಗಳನ್ನು ಮಾಡುವ ಜೊತೆಗೆ ಅಗತ್ಯವಿರುವ ಎಲ್ಲಾ ನೆರವು ಮತ್ತು ಪರಿಹಾರಗಳನ್ನು ಒದಗಿಸಲು ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ನಡೆಸಿ, ಶೀಘ್ರವೇ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಅಜಯ್ ಧರ್ಮಸಿಂಗ್ ಅವರು ಹೇಳಿದರು.

ಆಗಸ್ಟ್ 15ರ ಶನಿವಾರ ದಂದು ನಗರದ ಮಹಾತ್ಮಾ ಗಾಂಧೀಜಿ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತದ ವತಿಯಿಂದ 80ನೇ ಸ್ವಾತಂತ್ರ್ಯ ದಿನಾಚರಣೆ-2026ರ ಅಂಗವಾಗಿ ರಾಷ್ಟ್ರ ಧ್ವಜಾರೋಹಣ ನೇರವೇರಿಸಿ, ನಂತರ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.



ರೈತರ ಪರ ಸಭೆಗಳನ್ನು ನಡೆಸುವುದಷ್ಟೇ ಅಲ್ಲದೆ ಕಳೆದ 8 ದಿನಗಳ ಹಿಂದೆ ರಾಯಚೂರು ಜಿಲ್ಲೆಯ ಪ್ರತಿಯೊಂದು ತಾಲೂಕಿಗೂ ಖುದ್ದಾಗಿ ಭೇಟಿ ನೀಡಿ ಬರ ಪರಿಸ್ಥಿತಿಯನ್ನು ಪರಿಶೀಲಿಸಲಾಗಿದೆ. ರೈತರು ಎದುರಿಸುತ್ತಿರುವ ಸಮಸ್ಯೆಗಳು, ಕಷ್ಟಗಳು ಮತ್ತು ಸಂಕಷ್ಟಗಳನ್ನು ಹತ್ತಿರದಿಂದ ಆಲಿಸಿ, ವರದಿಯನ್ನು ಸಿದ್ಧಪಡಿಸಲಾಗುತ್ತಿದೆ. ಕೂಡಲೇ ಸರ್ಕಾರಕ್ಕೆ ಸಲ್ಲಿಸಲಾಗುವುದು ಹಾಗೂ ಅರ್ಹ ರೈತರಿಗೆ ಪರಿಹಾರ ಒದಗಿಸಲು ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ ನಡೆಸಿ ಕೆಲಸ ಮಾಡುವ ಅವಕಾಶ ಸಿಕ್ಕಿರುವುದು ಹೆಮ್ಮೆಯ ವಿಷಯ ಎಂದರು.

ಸಮಸ್ಯೆಗಳಿಗೆ ಸ್ಪಂದಿಸುವ ಭರವಸೆ: ಜಿಲ್ಲೆಯ ಜನರ ಯಾವುದೇ ಸಮಸ್ಯೆಗಳಿದ್ದರೂ ಅದಕ್ಕೆ ಎಲ್ಲರೂ ಸೇರಿ ಸಕಾರಾತ್ಮಕವಾಗಿ ಸ್ಪಂದಿಸುವ ಕೆಲಸವನ್ನು ಮಾಡಲಾಗುತ್ತದೆ. ಉಸ್ತುವಾರಿ ಸಚಿವರನ್ನಾಗಿ ನೇಮಕ ಮಾಡುವ ತೀರ್ಮಾನವನ್ನು ರಾಜ್ಯ ಸರ್ಕಾರ ತೆಗೆದುಕೊಂಡಿದ್ದಾರೆ. ಜಿಲ್ಲೆಯ ಉಸ್ತುವಾರಿಯ ಜೊತೆಗೆ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಚಿವನಾಗಿ ಇಡೀ ಕರ್ನಾಟಕ ರಾಜ್ಯದ ಜವಾಬ್ದಾರಿ ನನ್ನ ಮೇಲಿದೆ. ಹಿಂದೆ ತಮ್ಮ ತಂದೆಯವರಾದ ದಿವಂಗತ ಧರಂಸಿಂಗ್ ಸಾಹೇಬರು 1999 ರಿಂದ 2004 ರವರೆಗೆ ರಾಯಚೂರು ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಎಂಬುದನ್ನು ಸಚಿವರು ಸ್ಮರಿಸಿಕೊಂಡರು. ಈಗ ತಮಗೂ ಅದೇ ಜಿಲ್ಲೆಯ ಉಸ್ತುವಾರಿ ವಹಿಸಿಕೊಂಡು ಎಂದರು.

3ನೇ ಪುಟಕ್ಕೆ...

ಬಿಚ್ಚಾಲಿ ಗ್ರಾಮದಲ್ಲಿ ಹೊರಗಿನ ಕಿಟಗೇಡಿಗಳಿಂದ ಗಲಾಟೆ, ಯಾವ ಧರ್ಮವು ಎತ್ತಿ ಕಟ್ಟಿ ರಾಜಕೀಯ ಮಾಡಿಲ್ಲ, ಶಾಸಕ ದದ್ದಲ್

ರಾಯಚೂರು,ಆ.15-

ನಾನು ಜಾತ್ಯತೀತವಾದಿ, ಪ್ರಜಾತಂತ್ರ ವ್ಯವಸ್ಥೆಯನ್ನು ಬಲವಾಗಿ ನಂಬಿರುವವನು, ಸಂವಿಧಾನವೇ ನನ್ನ ಧರ್ಮ ಎಂದು ರೈಚೂರ್ ಗ್ರಾಮೀಣ ಕ್ಷೇತ್ರದ ಶಾಸಕರಾದ ಗದ್ದಲ್ ಗೌಡ ತೇರು ಅವರಿಂದ ವಾಹಿನಿ ಯೊಂದಿಗೆ ಮಾತನಾಡಿ ನಾನು ಯಾವುದೇ ಸಮಾಜವನ್ನು, ಧರ್ಮವನ್ನು ಎತ್ತಿ ಕಟ್ಟಿ, ಅಶಾಂತಿ ಉಂಟು ಮಾಡುವ ಮೂಲಕ ರಾಜಕೀಯ ಲಾಭ ಪಡೆಯುವ ಸಣ್ಣ ಮನಸ್ಸಿನವನಲ್ಲ.

ನಾನು ಗುಣಮಟ್ಟದ ರಾಜಕಾರಣ ಮಾಡುತ್ತೇನೆ ಎಂದು ಹೇಳಿದರು. ಬಿಚ್ಚಾಲಿ ಗ್ರಾಮದಲ್ಲಿ ಚರ್ಚ್ ಮತ್ತು ಮಂದಿರ ವಿಚಾರ



ವಿವಾದ ಮಾಡಿದ ಕಿಡಿಗೇಡಿಗಳು ಮೂಲತಃ ಗ್ರಾಮದವರಲ್ಲ. ಕೆಲವರ ಕುಮ್ಮಕ್ಕಿನಿಂದ ಇದು ನಡೆದಿದೆ

ಇದರ ಬಗ್ಗೆ ಕ್ರಮ ಜರುಗಿಸುವಂತೆ ಜಿಲ್ಲಾಡಳಿತಕ್ಕೆ, ಜಿಲ್ಲಾ ಪೊಲೀಸ್ ಇಲಾಖೆಗೆ ತಿಳಿಸಿದ್ದೇನೆ ಎಂದು ನುಡಿದರು. ಸರ್ಕಾರವು ಚರ್ಚ್ ನಿರ್ಮಾಣಕ್ಕೆ ಅನುದಾನ ನೀಡಿದ ಕಾರಣ ಅಲ್ಲಿ ಚರ್ಚ್ ಕಟ್ಟಲಾಗಿದೆ ಯಾವುದೇ ದುರುದ್ದೇಶ ಇದ್ದರೆ ಹಿಂದೆ ಇಲ್ಲ. ಮಂದಿರ ಕಾಯಿಯೂ ಒಂದು ಎಕರೆ ಜಾಗ ಕೊಡುವಂತೆ ಸರ್ಕಾರಕ್ಕೆ ಕೋರಲಾಗಿದೆ ಬೇಲಿ ಹಾಕುವಂತೆ ಹೇಳಲಾಗಿದೆ. ಇಷ್ಟರಲ್ಲೇ ಭವ್ಯವಾದ ಮಂದಿರವು ನಿರ್ಮಾಣವಾಗಲಿದೆ ಎಂದರು. ನವದಿಯಲ್ಲಿ 300 ಮೇಲ್ಪಟ್ಟು ಮಂದಿರಗಳನ್ನು ಕಟ್ಟಲಾಗಿದೆ. ಗ್ರಾಮ ದೇವತೆ ಮತ್ತು ಕುಲದೇವತೆಗಳ ಮಂದಿರಗಳನ್ನು ಆಯ ಗ್ರಾಮದ ಜನರ

3 ನೇ ಪುಟಕ್ಕೆ...

ಭಾರತ ಭಾಗ್ಯವಿಧಾತ ಬಾಬಾಸಾಹೇಬ ಅಂಬೇಡ್ಕರರ ಸಾವಿಧಾನಿಕ ಮಾರ್ಗದಲ್ಲಿ ಸ್ವತಂತ್ರ ಭಾರತವನ್ನು ಮುನ್ನಡೆಸೋಣ-ಪ್ರೊ.ಕರಿಗೂಳಿ

ಗಂಗಾವತಿ,ಆ.16-

ತಾಲೂಕಿನ ಶ್ರೀರಾಮನಗರದ ಚಿಲುಕೂರಿ ನಾಗೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 80ನೇ ಸ್ವಾತಂತ್ರ್ಯೋತ್ಸವ ದಿನಾಚರಣೆಯನ್ನು ಸಂಭ್ರಮದಿಂದ ಹಾಗೂ ಘನತೆಯಿಂದ ಆಚರಿಸಲಾಯಿತು. ಗಾಂಧೀಜೀ ಹಾಗೂ ಬಾಬಾ ಸಾಹೇಬರ ಅಂಬೇಡ್ಕರರ ಭಾವ ಚಿತ್ರಕ್ಕೆ ಸಾಮೂಹಿಕವಾಗಿ ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸಿ ನಂತರ ಧ್ವಜಾರೋಹಣ ನೆರವೇರಿಸಲಾಯಿತು, ಧ್ವಜಾರೋಹಣ ಮಾಡಿ ಮಾತನಾಡಿದ ಪ್ರಾಂಶುಪಾಲರಾದ ಡಾ.ಕರಿಗೂಳಿಯವರು ಸ್ವಾತಂತ್ರ್ಯ ಹೋರಾಟದಲ್ಲಿ ಹೋರಾಡಿ ಮಡಿದ ಮಹನೀಯರ ತ್ಯಾಗ ಬಲಿದಾನಗಳ ಕುರಿತು ಹಾಗೂ



ಹುತಾತ್ಮರಾದ ಅಸಖ್ಯಾತ ವೀರ ಸೇನಾನಿಗಳ ಕುರಿತು ಮಾತನಾಡಿದರು, ಅವರ ತ್ಯಾಗವು ದೇಶಪ್ರೇಮಿಗಳಿಗೆ ಚಿರಕಾಲ ಆದರ್ಶ ಎಂದರು. ಭವ್ಯಭಾರತದ ಪ್ರಥಮ ಪ್ರಜೆಗಳಾದ ಮಾನ್ಯ ರಾಷ್ಟ್ರಪತಿಗಳು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದಂತೆ ವಿದ್ಯಾರ್ಥಿಗಳೇ ನವಭಾರತದ ಭವಿಷ್ಯದ ನಿರ್ಮಾತೃಗಳು ಎಂಬುದನ್ನು ವಿದ್ಯಾರ್ಥಿಗಳು ಜವಾಬ್ದಾರಿಯುತವಾಗಿ ಸ್ವೀಕರಿಸಬೇಕು ಎಂದು ಕಿವಿಮಾತು

3 ನೇ ಪುಟಕ್ಕೆ...

ರಾಯಚೂರಿನಲ್ಲಿ ಪ್ರಥಮ ಬಾರಿಗೆ ದಕ್ಷಿಣ ಭಾರತ ಬ್ಯಾಡ್ಮಿಂಟನ್ ಟೂರ್ನಿ

ಗ್ರಾಮೀಣ ಭಾಗದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಟೂರ್ನಿ ಆಯೋಜನೆ: ಕುಮಾರ್ ಬಂಗಾರಪ್ಪ

ರಾಯಚೂರು,ಆ.15-

ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ನೇತೃತ್ವ, ಜಿಲ್ಲಾಡಳಿತ ಹಾಗೂ ಸ್ಥಳೀಯ ಜನಪ್ರತಿನಿಧಿಗಳ ಸಹಯೋಗದೊಂದಿಗೆ ದಕ್ಷಿಣ ಭಾರತ ಬ್ಯಾಡ್ಮಿಂಟನ್ ಟೂರ್ನಿ ಇದೇ ಸೆಪ್ಟೆಂಬರ್ 5 ರಿಂದ ಸೆಪ್ಟೆಂಬರ್ 8ರವರೆಗೆ ರಾಯಚೂರಿನಲ್ಲಿ ಅತ್ಯಂತ ವಿಜೃಂಭಣೆಯಿದ ನಡೆಯಲಿದೆ ಎಂದು ಕರ್ನಾಟಕ ಸರ್ಕಾರದ ಮಾಜಿ ಸಚಿವರು ಹಾಗೂ ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಹಾಲಿ ರಾಜ್ಯಾಧ್ಯಕ್ಷರಾದ ಕುಮಾರ ಬಂಗಾರಪ್ಪ ಎಸ್.ಅವರು ಹೇಳಿದರು.



ಆಗಸ್ಟ್ 15ರ ಶನಿವಾರ ದಂದು ನಗರದ ಮಹಾತ್ಮಾ ಗಾಂಧೀಜಿ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಪತ್ರಿಕೋಷ್ಠಿಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಪ್ರತಿ ಆರು ವರ್ಷಕ್ಕೊಮ್ಮೆ ಕರ್ನಾಟಕಕ್ಕೆ ಒಲಿಯುವ ದಕ್ಷಿಣ ಭಾರತ ಮಟ್ಟದ ಈ ಬೃಹತ್ ಕ್ರೀಡಾಕೂಟವನ್ನು ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಆಯೋಜಿಸಲಾಗುತ್ತಿತ್ತು. ಆದರೆ ಈ ಬಾರಿ ಗ್ರಾಮೀಣ ಭಾಗ ಹಾಗೂ ಹಿಂದುಳಿದ ಕಲ್ಯಾಣ ಕರ್ನಾಟಕ ಭಾಗದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ರಾಯಚೂರು ಜಿಲ್ಲೆಯನ್ನು ಆಯ್ಕೆ ಮಾಡಲಾಗಿದೆ. ಈ ಕ್ರೀಡಾಕೂಟದಲ್ಲಿ ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಪುದುಚೇರಿ, ಅಂಡಮಾನ್ ಮತ್ತು ನಿಕೋಬಾರ್ ಹಾಗೂ ಆತಿಥೇಯ ಕರ್ನಾಟಕ ಸೇರಿದಂತೆ ಒಟ್ಟು 7 ರಾಜ್ಯಗಳಿಂದ ಸುಮಾರು 250 ರಿಂದ 300 ಪ್ರಮುಖ ಕ್ರೀಡಾಪಟುಗಳು ಸೇರಿದಂತೆ ತರಬೇತುದಾರರು ಮತ್ತು ತಾಂತ್ರಿಕ ತಂಡದ ಸದಸ್ಯರು ಭಾಗವಹಿಸಲಿದ್ದಾರೆ ಎಂದರು. ರಾಯಚೂರಿನ

3 ನೇ ಪುಟಕ್ಕೆ...

ವೀರ ಸಾವರ್ಕರ್ ಯೂಥ್ ಅಸೋಸಿಯೇಷನ್‌ನಿಂದ 20ನೇ ವರ್ಷದ ಮಧ್ಯರಾತ್ರಿ ಸ್ವಾತಂತ್ರ್ಯೋತ್ಸವ

ರಾಯಚೂರು,ಆ.15-

ನಗರದ ಭಗತ್ ಸಿಂಗ್ ಸರ್ಕಲ್‌ನಲ್ಲಿ ವೀರ ಸಾವರ್ಕರ್ ಯೂಥ್ ಅಸೋಸಿಯೇಷನ್ ವತಿಯಿಂದ ಕಳೆದ 20ವರ್ಷಗಳಿಂದ ಸತತವಾಗಿ ಮಧ್ಯರಾತ್ರಿ 12 ಗಂಟೆಗೆ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಈ ವರ್ಷವೂ ಆಗಸ್ಟ್ 15ರ ಆರಂಭದ ಕ್ಷಣವಾದ ಮಧ್ಯರಾತ್ರಿ 12 ಗಂಟೆಗೆ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಸ್ವಾತಂತ್ರ್ಯೋತ್ಸವವನ್ನು ದೇಶಭಕ್ತಿ ಹಾಗೂ ಸಂಭ್ರಮದ ವಾತಾವರಣದಲ್ಲಿ ನಡೆಯುತ್ತಿರುವ ಈ ವಿಶಿಷ್ಟ ಕಾರ್ಯಕ್ರಮವು ರಾಯಚೂರು ನಗರದ ಯುವಜನತೆಗೆ ದೇಶಭಕ್ತಿ, ರಾಷ್ಟ್ರಪ್ರೇಮ ಮತ್ತು ಸಾಮಾಜಿಕ ಜವಾಬ್ದಾರಿಯ ಸ್ಫೂರ್ತಿಯ ಕೇಂದ್ರವಾಗಿ ರೂಪುಗೊಂಡಿದೆ. ಮಧ್ಯರಾತ್ರಿ 12 ಗಂಟೆಗೆ ರಾಷ್ಟ್ರಧ್ವಜಾರೋಹಣ ಮಾಡುವ ಮೂಲಕ ಸ್ವಾತಂತ್ರ್ಯದ ದಿನವನ್ನು ಸ್ವಾಗತಿಸುವ ಈ ಪರಂಪರೆ ಯುವಕರಲ್ಲಿ ವಿಶೇಷ ಉತ್ಸಾಹ ಮತ್ತು ಪ್ರೇರಣೆಯನ್ನು



ಮೂಡಿಸುತ್ತಿದೆ.ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸ್ವಾತಂತ್ರ್ಯ ಹೋರಾಟಗಾರರು, ಹುತಾತ್ಮರು ಹಾಗೂ

3 ನೇ ಪುಟಕ್ಕೆ...

ಸಿ.ಹೆಚ್. ಪೌಡರ್ ಮಿಶ್ರಿತ ಹೆಂಡ ಮಾರಾಟಕ್ಕೆ ಕಡಿವಾಣಕ್ಕೆ ಕರವೇಯಿಂದ ಸಚಿವರಿಗೆ ಮನವಿ



ರಾಯಚೂರು,ಆ.15-

ಜಿಲ್ಲೆಯಲ್ಲಿ ಸಿ.ಹೆಚ್. ಪೌಡರ್ ಮಿಶ್ರಿತ ಹೆಂಡ ಹಾಗೂ ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಹಾಕಬೇಕು. ಸರ್ಕಾರದ ನಿಯಮ ಗಳನ್ನು ಉಲ್ಲಂಘಿಸಿ ವಹಿವಾಟು ನಡೆಸುತ್ತಿರುವ ಮದ್ಯದಂಗಡಿಗಳ ವಿರುದ್ದ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ವಿನೋ ದರೆಡ್ಡಿ

3 ನೇ ಪುಟಕ್ಕೆ...

ಕೊಲೆಯಾದ ಭೂಮಾನಂದ ಕುಟುಂಬಕ್ಕೆ ಪರಿಹಾರಕ್ಕೆ ಒತ್ತಾಯ

ರಾಯಚೂರು,ಆ.15-

ದೇವದುರ್ಗ ತಾಲೂಕಿನ ಸುಂಕೇಶ್ವರಹಾಳ ಹತ್ತಿರ ನಡೆದ ದಲಿತ ಮುಖಂಡ ಭೂಮಾನಂದ ಬರ್ಬರ ಹತ್ಯೆಯನ್ನು ಖಂಡಿಸಿದ, ಮಾದಿಗ ದಂಡೋರ ಸಮಿತಿಯು ಜಿಲ್ಲಾ ಉಸ್ತುವಾರಿ ಮಂತ್ರಿ ಅಜಯ್ ಸಿಂಗ ಇವರಿಗೆ ಮನವಿ ಪತ್ರ ನೀಡಿತು. ಸಮಿತಿಯ ರಾಜ್ಯಧ್ಯಕ್ಷರಾದ ನರಸಪ್ಪ ದಂಡೋರಾ ಅವರು ಕೊಲೆ ಆರೋಪಿಗಳು ತಪ್ಪಿಸಿಕೊಳ್ಳದಂತೆ ಬಂಧಿಸಿ ಕಠಿಣ ಶಿಕ್ಷೆಗೆ ಒಳಪಡಿಸಬೇಕು. ತಕ್ಷಣ ನೊಂದ ಕುಟುಂಬಕ್ಕೆ ಜೀವನ ನಿರ್ವಹಣೆಗೆ 5 ಎಕರೆ ಜಮೀನು ಕೊಡಬೇಕು. ಕುಟುಂಬಕ್ಕೆ ಸರ್ಕಾರಿ ಹುದ್ದೆ ನೀಡಬೇಕು. ಜೊತೆಗೆ 50 ಲಕ್ಷ ಪರಿಹಾರ ಧನ ಕೊಡಬೇಕು ಎಂದು ಮಾದಿಗ ದಂಡೋರ



ರಾಜ್ಯಾಧ್ಯಕ್ಷರಾದ ನರಸಪ್ಪ ದಂಡೋರ ಒತ್ತಾಯಿಸಿದರು.

ಜಿಲ್ಲೆಯಲ್ಲಿ ಇತ್ತೀಚೆಗೆ ಜಾತಿ ಹೆಸರಿನಲ್ಲಿ ದಲಿತರನ್ನು ಕಗ್ಗೊಲೆ ಮಾಡಲಾಗುತ್ತಿದೆ. ತಕ್ಷಣ ಪ್ರವೃತ್ತಿಗೆ ಕಳುವನಾಗಬೇಕು. ಮಂದಿರದ ಪ್ರವೇಶದ ಹೆಸರಿನಲ್ಲಿ ಹಲ್ಲೆ, ಹೋಟೆಲ್ಗಳಲ್ಲಿ ತಾರತಮ್ಯ,, ಹೆಸರಲ್ಲಿ ದೌರ್ಜನ್ಯಗಳ ನಡುವೆ ತಕ್ಷಣ ಪರಿಶಿಷ್ಟ ಬಗ್ಗೆ ಇರುವ ಕಾನೂನು ಅರಿವು ಕಾರ್ಯಕ್ರಮ ಪರಿಣಾಮಕಾರಿಯಾಗಿ ನಡೆಸಲು ಮನವಿ ಮಾಡಿದರು. ಈ ಸಂದರ್ಭದಲ್ಲಿ ರಂಜಿತ ದಂಡೋರ, ಧುಳಯ್ಯ ಗುಂಜಳ್ಳಿ, ಗೋವಿಂದ ಈಟೇಕರ್ ಜಕ್ರಪ್ಪ, ಅನಿಲ್ ಕುಮಾರ್ ಇದ್ದರು

3 ನೇ ಪುಟಕ್ಕೆ...

ಜಿಲ್ಲಾ ಟಾಸ್ಕ್ ಫೋರ್ಸ್ ಸಭೆಯಲ್ಲಿ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಸೂಚನೆ

ಅಕ್ರಮ ಗಣಿಗಾರಿಕೆ ಕಡಿವಾಣಕ್ಕೆ ಚೆಕ್‌ಪೋಸ್ಟ್ ಗಳಲ್ಲಿ ಕಣ್ಗಾವಲು

ಬಳ್ಳಾರಿ,ಆ.15-

ಅಧಿಕಾರಿಗಳು ಕೇವಲ ಕಚೇರಿ ಕೆಲಸಗಳಿಗೆ ಸೀಮಿತವಾಗದೆ ನಿರಂತರವಾಗಿ ಕ್ಷೇತ್ರ ಭೇಟಿ ಕೈಗೊಳ್ಳಬೇಕು. ಅಕ್ರಮ ಗಣಿಗಾರಿಕೆ ನಡೆಯದಂತೆ ಚೆಕ್‌ಪೋಸ್ಟ್ ಗಳಲ್ಲಿ ಕಟ್ಟುನಿಟ್ಟಿನ ಕಣ್ಗಾವಲು ಇರಿಸಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹೇಳಿದರು.

ನಗರದ ನೂತನ ಜಿಲ್ಲಾಡಳಿತ ಭವನದ ವಿಡಿಯೋ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಿದ್ದ ಜಿಲ್ಲಾ ಮರಳು ಸಮಿತಿ ಮತ್ತು ಜಿಲ್ಲಾ ಕಲ್ಲು ಪುಡಿ ಮಾಡುವ ಘಟಕಗಳ ಲೈಸೆನ್ಸ್ ಮತ್ತು ನಿಯಂತ್ರಣ ಪ್ರಾಧಿಕಾರದ ಜಿಲ್ಲಾ ಟಾಸ್ಕ್ ಫೋರ್ಸ್ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ ಬಹುತೇಕ ಗಣಿಗಾರಿಕೆ ಚಟುವಟಿಕೆಗಳು ಸಂಡೂರು ಭಾಗದಲ್ಲೇ ಕೇಂದ್ರೀಕೃತವಾಗಿರುವುದರಿಂದ, ದೈನಂದಿನ ಮೇಲ್ವಿಚಾರಣೆ ಹಾಗೂ ಜಂಟಿ ತಪಾಸಣೆಯನ್ನು ಚುರುಕುಗೊಳಿಸಲು, ಅಧಿಕಾರಿಗಳು ನಿತ್ಯ ಬಳ್ಳಾರಿಯಿಂದ ಸಂಡೂರಿಗೆ ಪ್ರಯಾಣಿಸುವುದನ್ನು ತಪ್ಪಿಸಲು ಹಾಗೂ ಸ್ಥಳದಲ್ಲೇ ನಿಯಂತ್ರಣ ಕೊಠಡಿ ಹೊಂದಲು ಸಂಡೂರಿನಲ್ಲಿ ಗಣಿ ಇಲಾಖೆಯ ಕ್ಯಾಂಪ್ ಆಫೀಸ್ ತೆರೆಯಲು ಪ್ರಸ್ತಾವನೆ ಸಲ್ಲಿಸಬೇಕು ಎಂದು ನಿರ್ದೇಶನ ನೀಡಿದರು.

★ವೇಬ್ರಿಡ್ಜ್ ಹಾಗೂ ಸಾಗಾಣಿಕೆ ಮೇಲೆ ಹದ್ದಿನಕಣ್ಣು:★

ಗಣಿ ಗುತ್ತಿಗೆ ಪ್ರದೇಶದ ಒಳಗಷ್ಟೇ ಅಲ್ಲದೆ, ಗಡಿಭಾಗದಿಂದ ಹೊರಹೋಗುವ ಮತ್ತು ಒಳಬರುವ ಅದಿರು ಸಾಗಾಣಿಕೆ, ವೇಬ್ರಿಡ್ಜ್‌ಳ ನಿಖರತೆ ಹಾಗೂ ತಪಾಸಣಾ ನಾಕಾಗಳ ಕಾರ್ಯನಿರ್ವಹಣೆಯನ್ನು ಅತ್ಯಂತ ಕಟ್ಟುನಿಟ್ಟಾಗಿ ಪರಿಶೀಲಿಸಬೇಕು. ಯಾವುದೇ ರೀತಿಯ ಸೋರಿಕೆಗೆ ಅವಕಾಶ ನೀಡದೆ ಗುರಿ ಸಾಧನೆಗೆ ಶ್ರಮಿಸಬೇಕೆಂದು ನಿರ್ದೇಶನ ನೀಡಿದರು.

★ರಾಜ್ಯದ ರಾಯಧನ ಗುರಿಯಲ್ಲಿ ಬಳ್ಳಾರಿಯದ್ದೇ ಸಿಂಹಪಾಲು:★

ಜಿಲ್ಲಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಉಪನಿರ್ದೇಶಕ ರಾಮ್ ಜಿ ನಾಯ್ಕ್ ಅವರು ಮಾತನಾಡಿ, 202627ನೇ ಸಾಲಿನಲ್ಲಿ ರಾಜ್ಯದ ಪ್ರಮುಖ ಖನಿಜಗಳಿಂದ ಒಟ್ಟು ರೂ.8,000 ಕೋಟಿ ರಾಜಸ್ವ ಸಂಗ್ರಹಿಸುವ ಗುರಿ ಹೊಂದಲಾಗಿದ್ದು, ಇದರಲ್ಲಿ ಬಳ್ಳಾರಿ ಜಿಲ್ಲೆಯೊಂದಕ್ಕೇ ರೂ.6,250 ಕೋಟಿ (ಶೇ. 78) ಗುರಿ ನಿಗದಿಪಡಿಸಲಾಗಿದೆ. 202526ನೇ ಸಾಲಿನಲ್ಲಿ ನಿಗದಿಯಾಗಿದ್ದ ರೂ.5,200 ಕೋಟಿ ಗುರಿಯಲ್ಲಿ ಜಿಲ್ಲೆಯು ರೂ. 4,922 ಕೋಟಿ (ಶೇ. 96) ಸಂಗ್ರಹಿಸಿ ಉತ್ತಮ ಸಾಧನೆ ತೋರಿತ್ತು. ಜುಲೈ ಅಂತ್ಯದವರೆಗೆ ನಿಗದಿಯಾಗಿದ್ದ ರೂ. 2,250 ಕೋಟಿ ಪ್ರಗತಿಪರ ಗುರಿಯ ಪೈಕಿ ರೂ.1,345.46 ಕೋಟಿ (ಶೇ. 59. ಸಂಗ್ರಹವಾಗಿದೆ. ಕಳೆದ ಮೂರು ತಿಂಗಳಿಗೆ ಹೋಲಿಸಿದರೆ ಜುಲೈ ತಿಂಗಳಲ್ಲಿ ರೂ.28 ಕೋಟಿಯಷ್ಟು ಅಧಿಕ ರಾಜಸ್ವ ಸಂಗ್ರಹ ದಾಖಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ ಸದ್ಯ ಚಾಲ್ತಿಯಲ್ಲಿರುವ 39 ಗಣಿ ಲೀಸ್‌ಗಳಲ್ಲಿ ನಿಯಮಾನುಸಾರ ಗಣಿಗಾರಿಕೆ ನಡೆಯುತ್ತಿದೆ. 2022ರ ಪರಿಷ್ಕೃತ



ಮಾರ್ಗಸೂಚಿಗಳ ಅನ್ವಯ, ಯಾವುದೇ ಪರವಾನಗಿ ಅಥವಾ ಅನುಮೋದನೆ ನೀಡುವ ಮುನ್ನ ಅರಣ್ಯ ಮತ್ತು ಗಣಿ ಇಲಾಖೆಯ ಜಂಟಿ ಪರಿಶೀಲನೆ ಸ್ಯಾಂಪಲ್ ಸಂಗ್ರಹ ಹಾಗೂ ಆನ್‌ಲೈನ್ ವರದಿ ಅಪ್‌ಲೋಡ್ ಪ್ರಕ್ರಿಯೆಗಳನ್ನು ಕೇವಲ 3 ದಿನಗಳ ಒಳಗಾಗಿ ಪೂರ್ಣಗೊಳಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ವಿವರಿಸಿದರು.

ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಪ್ರತಿಕ್ರಿಯಿಸಿ, ಕಳೆದ ವರ್ಷ ಶೇ. 96 ರಷ್ಟು ರಾಜಸ್ವ ಸಂಗ್ರಹ ಗುರಿ ತಲುಪಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಶೇ. 98 ರಷ್ಟು ಗುರಿ ಸಾಧನೆ ಮಾಡಲೇಬೇಕೆಂದು ನಿರ್ದೇಶನ ನೀಡಿದರು. ಅದೇರೀತಿಯಾಗಿ ಕಾರ್ಯಾಚರಣೆಯಲ್ಲಿಲ್ಲದ ಗಣಿ ಗುತ್ತಿಗೆಗಳನ್ನು ತ್ವರಿತವಾಗಿ ಕಾರ್ಯಾಚರಣೆಗೆ ತರಲು ಮತ್ತು ಗಣಿಗಾರಿಕೆಗೆ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕು. ಗಣಿಗಾರಿಕೆಯಿಂದ ಬರುವ ಆದಾಯದ ಜೊತೆಗೆ ನೈಸರ್ಗಿಕ ಪರಿಸರ ಹಾಗೂ ಜೀವವೈವಿಧ್ಯಕ್ಕೆ ಧಕ್ಕೆಯಾಗದಂತೆ ಸಮತೋಲನ ಕಾಯ್ದುಕೊಳ್ಳುವ ಅಗತ್ಯತೆಯ ಬಗ್ಗೆಯೂ ಕ್ರಮವಹಿಸಬೇಕು ಎಂದು ಹೇಳಿದರು.

★ನಿಯಮ ಉಲ್ಲಂಘಿಸುವ ಕ್ವಾರಿಗಳ ವಿರುದ್ಧ ಕಠಿಣ ಕ್ರಮ:★

ಜಿಲ್ಲೆಯಲ್ಲಿ ನಿಯಮಬಾಹಿರವಾಗಿ ಕಾರ್ಯಾಚರಣೆ ನಡೆಸುತ್ತಿರುವ ಮತ್ತು ಪರಿಸರ ನಿಯಮಗಳನ್ನು ಗಾಳಿಗೆ ತೂರಿರುವ ಕ್ವಾರಿ ಹಾಗೂ ಕ್ರಷರ್ ಮಾಲೀಕರ ವಿರುದ್ಧ ಮುಲಾಜಿಲ್ಲದೆ ಕಠಿಣ ಕ್ರಮ ಕೈಗೊಳ್ಳುವಂತೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಕಟ್ಟುನಿಟ್ಟಿನ ಸೂಚನೆ ನೀಡಿದರು.

★89 ಕ್ವಾರಿಗಳ ಪೈಕಿ 30 ಕ್ವಾರಿಗಳು ನಿಷ್ಕ್ರಿಯ:★

ಜಿಲ್ಲೆಯಲ್ಲಿ ಕಟ್ಟಡ ಕಲ್ಲು, ಅಲಂಕಾರಿಕ ಕಲ್ಲು, ಮುರಂ ಹಾಗೂ ಮರಳು ಸೇರಿದಂತೆ ಒಟ್ಟು 89 ಕ್ವಾರಿ ಗುತ್ತಿಗೆಗಳು ಮಂಜೂರಾಗಿದ್ದು, ಇವುಗಳಲ್ಲಿ ಪ್ರಸ್ತುತ 59 ಕ್ವಾರಿಗಳು ಮಾತ್ರ ಚಾಲ್ತಿಯಲ್ಲಿವೆ. ಉಳಿದ 30 ಕ್ವಾರಿಗಳು ಯಾವುದೇ ಚಟುವಟಿಕೆ ಇಲ್ಲದೆ ನಿಷ್ಕ್ರಿಯಗೊಂಡಿವೆ. ಒಂದು ವರ್ಷಕ್ಕೂ ಹೆಚ್ಚು ಕಾಲ ನಿಷ್ಕ್ರಿಯವಾಗಿರುವ ಕ್ವಾರಿಗಳನ್ನು ತಕ್ಷಣವೇ ಪರಿಶೀಲಿಸಿ, ನಿಯಮಾನುಸಾರ ಅವುಗಳ ಗುತ್ತಿಗೆಯನ್ನು ರದ್ದುಪಡಿಸಲು ಕ್ರಮ ಕೈಗೊಳ್ಳುವಂತೆ ಹಾಗೂ ರದ್ದುಗೊಂಡ ಜಾಗಗಳನ್ನು ಮರಳಿ ಸರ್ಕಾರದ ಸುಪರ್ದಿಗೆ ಪಡೆದು, ನಿಯಮಬದ್ಧವಾಗಿ ಮರು-ಹರಾಜು ಹಾಕುವಂತೆ ತಾಕೀತು ಮಾಡಿದರು.

★ಪರಿಸರ ನಿಯಮಗಳ ಕಡ್ಡಾಯ ಪಾಲನೆ:★

ಕ್ರಷರ್ ಮತ್ತು ಕ್ವಾರಿಗಳಲ್ಲಿ ಜಿಐ ಶೀಟ್ ಅಳವಡಿಕೆ, ಬಫರ್ ಜೋನ್ ನಿರ್ವಹಣೆ, ಧೂಳು ನಿಯಂತ್ರಣಕ್ಕೆ ನೀರಿನ ಸಿಂಪಡಣೆ ಹಾಗೂ ಸಾಗಾಣಿಕೆ ವಾಹನಗಳಿಗೆ ಕಡ್ಡಾಯವಾಗಿ ಹೊದಿಕೆ ಹಾಕುವ ನಿಯಮಗಳನ್ನು ಪಾಲಿಸದ ಘಟಕಗಳಿಗೆ ನೋಟಿಸ್ ನೀಡಿ ಕ್ರಮ ಜರುಗಿಸಬೇಕು ಎಂದರಲ್ಲದೇ, ಪ್ರಸ್ತುತ ಸಾಲಿನ ಎರಡು ತ್ರೈಮಾಸಿಕಗಳು ಮುಗಿದಿದ್ದರೂ ಸಣ್ಣ ಖನಿಜಗಳ ರಾಜಸ್ವ ಸಂಗ್ರಹದ ನಿರೀಕ್ಷಿತ ಪ್ರಮಾಣದ ಸಾಧನೆಯಾಗಿಲ್ಲ. ಗುರಿ ಸಾಧನೆಗೆ ಬಾಕಿ ಉಳಿದಿರುವ ಬ್ಲಾಕ್‌ಗಳನ್ನು ಶೀಘ್ರವಾಗಿ ಹರಾಜು ಪ್ರಕ್ರಿಯೆಗೆ ಒಳಪಡಿಸಬೇಕು ಎಂದು ಸೂಚಿಸಿದರು.

★ಮಾದರಿ ತಪಾಸಣಾ ಠಾಣೆಗಳ ಸ್ಥಾಪನೆ:★

ಜಿಲ್ಲೆಯ ವ್ಯಾಪ್ತಿಯಲ್ಲಿ 9 ಚೆಕ್‌ಪೋಸ್ಟ್‌ಳಿದ್ದು, ಇವುಗಳನ್ನು ಸಿಸಿಟಿವಿ ಕ್ಯಾಮೆರಾ, ವೆಯ್‌ಬ್ರಿಡ್ಜ್ ಇಂಟಿಗ್ರೇಷನ್ ಮತ್ತು ಸ್ಯಾಂಪಲ್ ಪರೀಕ್ಷಾ ಸೌಲಭ್ಯಗಳೊಂದಿಗೆ ಸುಸಜ್ಜಿತ ಮಾದರಿ ತಪಾಸಣಾ ಠಾಣೆ'ಗಳನ್ನಾಗಿ ಪರಿವರ್ತಿಸಲಾಗುವುದು. ವಾಹನಗಳ ಸಂಚಾರ, ಖನಿಜದ ತೂಕ, ಗುಣಮಟ್ಟ ಮತ್ತು ರವಾನೆ ಪರವಾನಗಿ ಪರಿಶೀಲನೆಯನ್ನು ಡಿಜಿಟಲ್ ಹಾಗೂ ಪಾರದರ್ಶಕವಾಗಿ ನಿರ್ವಹಿಸಬೇಕು. ಉಳಿದ ಚೆಕ್‌ಪೋಸ್ಟ್‌ಳ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಿ, ಅಗತ್ಯ ಮೂಲಸೌಕರ್ಯ ಹಾಗೂ ಸಿಬ್ಬಂದಿ ನಿಯೋಜನೆಯೊಂದಿಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯಾಚರಣೆ ಆರಂಭಿಸುವತೆ ಗಣಿ ಇಲಾಖೆ ಅಧಿಕಾರಿಗಳಿಗೆ ಎಂದು ಸೂಚಿಸಿದರು.

★ಎನ್‌ಎಂಡಿಸಿ ಕನ್ವೇಯರ್ ಸಾಮರ್ಥ್ಯ ಹೆಚ್ಚಳಕ್ಕೆ ನೋಟಿಸ್:★

ಸುಪ್ರೀಂ ಕೋರ್ಟ್ ಆದೇಶದಂತೆ ರಸ್ತೆ ಮೂಲಕ ಅದಿರು ಸಾಗಾಣಿಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿ, ಕನ್ವೇಯರ್ ಬೆಲ್ಟ್ ಹಾಗೂ ರೈಲ್ವೆ ಸೈಡಿಂಗ್ ಮೂಲಕವೇ ಸಾಗಿಸಬೇಕಿದೆ. ಪ್ರಸ್ತುತ ಎನ್‌ಎಂಡಿಸಿ ವಾರ್ಷಿಕ ಸುಮಾರು 8.6 ರಿಂದ 15 ಮಿಲಿಯನ್ ಮೆಟ್ರಿಕ್ ಟನ್ ಅದಿರು ಉತ್ಪಾದಿಸುತ್ತಿದ್ದರೂ, ಪ್ರಸ್ತುತ ಇರುವ ಎಸ್ಪಿ-2 ಕನ್ವೇಯರ್ ಸಾಮರ್ಥ್ಯ ಕೇವಲ 3 ರಿಂದ 4 ಮಿಲಿಯನ್ ಮೆಟ್ರಿಕ್ ಟನ್ ಮಾತ್ರ ಇರುವುದು ಕಂಡುಬದಿದೆ. ರಸ್ತೆ ಸಾರಿಗೆಯನ್ನು ಪೂರ್ಣ ಪ್ರಮಾಣದಲ್ಲಿ ತಡೆಗಟ್ಟಲು ಕನ್ವೇಯರ್ ಬೆಲ್ಟ್ ಮೂಲಸೌಕರ್ಯ ಸಾಮರ್ಥ್ಯವನ್ನು ತಕ್ಷಣವೇ ವಿಸ್ತರಿಸುವಂತೆ ಎನ್‌ಎಂಡಿಸಿಗೆ ಅಧಿಕೃತ ನೋಟಿಸ್ ಜಾರಿ ಮಾಡಬೇಕು ಎಂದು ಡಿಎಂಜಿ ಅಧಿಕಾರಿಗಳಿಗೆ ಸೂಚಿಸಿದರು. ನದಿ ಪಾತ್ರ, ಕೆರೆಗಳು ಹಾಗೂ ಸರ್ಕಾರಿ ಜಮೀನುಗಳಲ್ಲಿ ಲಭ್ಯವಿರುವ ಮರಳು ಮತ್ತು ಗ್ರಾವೆಲ್ ಪ್ರಮಾಣವನ್ನು ವೈಜ್ಞಾನಿಕವಾಗಿ ಸರ್ವೆ ನಡೆಸಿ ಗುರುತಿಸಬೇಕು. ಕಾನೂನುಬದ್ಧವಾಗಿ ಅನುಮತಿ ನೀಡಲು ಸೂಕ್ತ ಸ್ಥಳಗಳನ್ನು ಗುರುತಿಸಿ, ಕೂಡಲೇ ಅಧಿಕೃತವಾಗಿ ಅಧಿಸೂಚನೆ ಹೊರಡಿಸಬೇಕು. ಗುತ್ತಿಗೆದಾರರು ಕೇವಲ ಅಧಿಸೂಚಿತ ಸ್ಥಳಗಳಿಂದ ಮಾತ್ರ ನಿಯಮಾನುಸಾರ ಮರಳು, ಮಣ್ಣು ತೆಗೆಯಲು ಅವಕಾಶ ನೀಡಬೇಕು. ಪಟ್ಟಾ ಜಮೀನುಗಳಲ್ಲಿ ಮರಳು ತೆಗೆಯಲು ಬಂದಿರುವ ಅರ್ಜಿಗಳನ್ನು ನಿಯಮಾವಳಿ ಪ್ರಕಾರ ಪರಿಶೀಲಿಸಿ, ತ್ವರಿತವಾಗಿ ವಿಲೇವಾರಿ ಮಾಡಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

★ಅಕ್ರಮ ತಡೆಗೆ ಕಟ್ಟುನಿಟ್ಟಿನ ಜಾಗೃತ ದಳ ಹಾಗೂ ಗಸ್ತು:★

ಜಿಲ್ಲಾ ಮಟ್ಟದಲ್ಲಿ ಸಂಬಧಿಸಿದ ಹಿರಿಯ ಅಧಿಕಾರಿಗಳು ಹಾಗೂ ತಾಲೂಕು ಮಟ್ಟದಲ್ಲಿ ತಹಶೀಲ್ದಾರ್ ಕಂದಾಯ ನಿರೀಕ್ಷಕರು, ಪೊಲೀಸ್, ಅರಣ್ಯ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಧಿಕಾರಿಗಳನ್ನೊಳಗೊಂಡ ಜಂಟಿ ಟಾಸ್ಕ್ ಫೋರ್ಸ್ ರಚಿಸಲಾಗುವುದು. ವಾರಕ್ಕೊಮ್ಮೆಯಾದರೂ ಅನಿರೀಕ್ಷಿತ ದಾಳಿ ನಡೆಸಿ ವರದಿ ನೀಡಬೇಕು. ರಾತ್ರಿ ವೇಳೆ ನಡೆಯುವ ಅಕ್ರಮ ಸಾಗಾಣಿಕೆಯನ್ನು ತಡೆಯಲು ಪೊಲೀಸ್ ಇಲಾಖೆಯ ಸಹಯೋಗದೊಂದಿಗೆ ಗಸ್ತು ತೀವ್ರಗೊಳಿಸಬೇಕು ಎಂದು ತಿಳಿಸಿದರು.

ಕೆರೆ-ಹಳ್ಳಗಳು ಅದಿರು ಧೂಳಿನಿಂದ ಕಲುಷಿತಗೊಳ್ಳದಂತೆ ಮುನ್ನೆಚ್ಚರಿಕೆ ವಹಿಸಲು ಗಣಿ ಕಂಪನಿಗಳಿಗೆ ಕಟ್ಟುನಿಟ್ಟಿನ ಎಚ್ಚರಿಕೆ ನೀಡಬೇಕು. ನಿಯಮಗಳನ್ನು ಉಲ್ಲಂಘಿಸಿ ಅಕ್ರಮ ಗಣಿಗಾರಿಕೆ ಮತ್ತು ಸಾಗಾಣಿಕೆ ಮಾಡುವವರ ವಿರುದ್ಧ ಯಾವುದೇ ಮುಲಾಜಿಲ್ಲದೆ ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

★ದೂರುಗಳ ಪರಿಶೀಲನೆಗೆ ಕಂಟ್ರೋಲ್ ರೂಂ ಹಾಗೂ ತಂಡಗಳ ರಚನೆ:★

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪೆನ್ನೇಕರ್ ಅವರು ಮಾತನಾಡಿ, ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆಯ ನಡುವೆ ಸಮನ್ವಯ ಸಾಧಿಸಲು ವಿಶೇಷ ಕಂಟ್ರೋಲ್ ರೂಂ ವ್ಯವಸ್ಥೆ ಮಾಡಲಾಗುವುದು. ಸಾರ್ವಜನಿಕರ ದೂರುಗಳನ್ನು ಸ್ವೀಕರಿಸಿ, ತಕ್ಷಣ ಕಾರ್ಯಾಚರಣೆಗೆ ಇಳಿಯಲು ಅಧಿಕಾರಿಗಳ ತಂಡಗಳ ವಿವರಗಳನ್ನು ಕಂಟ್ರೋಲ್ ರೂಂಗೆ ಜೋಡಿಸಲಾಗುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ ಬಳ್ಳಾರಿ ವಲಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ.ಬಸವರಾಜ್ ಕೆ.ಎನ್., ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್, ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ ಸೇರಿದಂತೆ ಭೂವಿಜ್ಞಾನಿಗಳು, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

ಆರೋಗ್ಯಕರ ಜೀವನಶೈಲಿಯಿಂದ ಸಂಕ್ರಾಮಿಕವಲ್ಲದ ರೋಗ ನಿಯಂತ್ರಣ ಸಾಧ್ಯ: ಪ್ರೊ.ಅಶ್ಫಾಕ್ ಅಹ್ಮದ್

ಕಲಬುರಗಿ,ಆ.15-

ಸಂಕ್ರಾಮಿಕವಲ್ಲದ ರೋಗಗಳು ಬಹುತೇಕ ಜೀವನಶೈಲಿಗೆ ಸಂಬಂಧಿಸಿದವಾಗಿದ್ದು, ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಮೂಲಕ ಇವುಗಳನ್ನು ಬಹುಮಟ್ಟಿಗೆ ನಿಯಂತ್ರಿಸಬಹುದು ಎಂದು ಕೆಬಿಎನ್ ವಿಶ್ವವಿದ್ಯಾಲಯದ ಸಮ-ಉಪಕುಲಪತಿ ಪ್ರೊ.ಅಶ್ಫಾಕ್ ಅಹ್ಮದ್ ಹೇಳಿದರು.

ಖಾಜಾ ಬಂದಾನವಾಜ ವಿಶ್ವವಿದ್ಯಾಲಯದ ವೈದ್ಯಕೀಯ ನಿಕಾಯದ ಬಯೋಕೆಮಿಸ್ಟ್ರಿ ಹಾಗೂ ಕಮ್ಯುನಿಟಿ ಮೆಡಿಸಿನ್ ವಿಭಾಗಗಳು ಜಂಟಿಯಾಗಿ ಆಯೋಜಿಸಿದ್ದ ಅಂತಾರಾಷ್ಟ್ರೀಯ ಸಿಎಂಇ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಪ್ರತಿ ವರ್ಷ ಸಂಕ್ರಾಮಿಕವಲ್ಲದ ರೋಗಗಳಿಂದ 4.5ರಿಂದ 5 ಕೋಟಿ ಜನರು ಸಾವನ್ನಪ್ಪುತ್ತಿದ್ದಾರೆ. ವಾಯುಮಾಲಿನ್ಯವೂ ವರ್ಷಕ್ಕೆ 70ರಿಂದ 80 ಲಕ್ಷ ಜನರ ಸಾವಿಗೆ ಕಾರಣವಾಗುತ್ತಿದೆ. ಹೀಗಾಗಿ ಆರೋಗ್ಯಕರ ಆಹಾರ ಪದ್ಧತಿ, ನಿಯಮಿತ ವ್ಯಾಯಾಮ ಸೇರಿದಂತೆ ಉತ್ತಮ ಜೀವನಶೈಲಿಯನ್ನು ರೂಢಿಸಿಕೊಳ್ಳುವುದು ಅಗತ್ಯ ಎಂದು ಹೇಳಿದರು.

ವಿಶ್ವವಿದ್ಯಾಲಯಗಳು ಜ್ಞಾನದ ಕೇಂದ್ರಗಳಾಗಿದ್ದು, ಸಮಾಜದ ಆರೋಗ್ಯದ ಹಿತದೃಷ್ಟಿಯಿಂದ ಸಂಶೋಧನೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಸಾಮಾಜಿಕ ಜವಾಬ್ದಾರಿಯ ಭಾಗವಾಗಿ ಇಂತಹ ಸಿಎಂಇ ಹಾಗೂ ವಿಚಾರ ಸಂಕಿರಣಗಳನ್ನು ಆಯೋಜಿಸುವ ಮೂಲಕ ವೈದ್ಯರು ಮತ್ತು ವಿದ್ಯಾರ್ಥಿಗಳು ತಮ್ಮ ಜ್ಞಾನವನ್ನು ನವೀಕರಿಸಿಕೊಳ್ಳಬೇಕು ಎಂದರು.

ಅಕಾಡೆಮಿಕ್ಸ್ ಡೀನ್ ಡಾ. ಜಮಾ ಮೂಸ್ವಿ ಮಾತನಾಡಿ, ಸಂಕ್ರಾಮಿಕವಲ್ಲದ ರೋಗಗಳ ಬಹುಪಾಲು ಪ್ರಕರಣಗಳು



ಕಡಿಮೆ ಆದಾಯದ ದೇಶಗಳಲ್ಲಿ ಕಂಡುಬರುತ್ತಿವೆ. ದೈಹಿಕ ವ್ಯಾಯಾಮ, ಆರೋಗ್ಯಕರ ಆಹಾರ ಪದ್ಧತಿ ಹಾಗೂ ಮದ್ಯಪಾನದಿಂದ ದೂರವಿರುವುದು ಇಂತಹ ರೋಗಗಳ ನಿಯಂತ್ರಣಕ್ಕೆ ಪ್ರಮುಖವಾಗಿದೆ ಎಂದರು. ಆಹಾರ, ಪೋಷಣೆ, ಸಮಾಜಶಾಸ್ತ್ರ ಮತ್ತು ಕಮ್ಯುನಿಟಿ ಮೆಡಿಸಿನ್ ಕ್ಷೇತ್ರಗಳಲ್ಲಿ ವಿವಿಧ ವಿಭಾಗಗಳು ಒಗ್ಗೂಡಿ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸುವ ಅಗತ್ಯವಿದೆ ಎಂದು ತಿಳಿಸಿದರು.

ವೈದ್ಯಕೀಯ ಡೀನ್ ಡಾ. ಗುರುಪ್ರಸಾದ್ ಮಾತನಾಡಿ, ಉತ್ತಮ ಆಹಾರ, ಸಮರ್ಪಕ ನಿದ್ರೆ ಹಾಗೂ ಒತ್ತಡರಹಿತ ಜೀವನಶೈಲಿ ಆರೋಗ್ಯಕರ ಬದುಕಿಗೆ ನಾಂದಿ ಎಂದು ಹೇಳಿದರು.

ಕುಲಸಚಿವ ಮಿರ್ ವಿಲಾಯತ್ ಅಲಿ ಮಾತನಾಡಿ, ಸಕ್ಕರೆ ಕಾಯಿಲೆ, ರಕ್ತದೊತ್ತಡ ಹಾಗೂ ಬೊಜ್ಜು ಇಂದಿನ ದಿನಗಳಲ್ಲಿ ಸಾಮಾನ್ಯವಾಗಿದ್ದು, ಇವು ದೇಶದ ಆರೋಗ್ಯ ಕ್ಷೇತ್ರಕ್ಕೆ ಸವಾಲಾಗಿವೆ. ಜಾಗೃತಿ ಮತ್ತು ಪ್ರಾಯೋಗಿಕ ಜ್ಞಾನದಿಂದ ಇವುಗಳನ್ನು ನಿಯಂತ್ರಿಸಲು ಸಾಧ್ಯ ಎಂದರು.

ಐಕ್ಯೂಎಸಿ ನಿರ್ದೇಶಕ ಡಾ. ಅಬ್ದುಲ್ ಬಷೀರ್ ಅವರು ಆಯೋಜಕ ವಿಭಾಗಗಳನ್ನು ಅಭಿನಂದಿಸಿ, ಆಡಳಿತ ಮಂಡಳಿಗೆ ಧನ್ಯವಾದ ಸಲ್ಲಿಸಿದರು. ಸಿಎಂಇ ಅಂಗವಾಗಿ ವೈದ್ಯಕೀಯ ನಿಕಾಯದ ಮೊದಲ ಸಂಚಿಕೆಯನ್ನು ಬಿಡುಗಡೆ ಮಾಡಲಾಯಿತು. ಸುಮಾರು 500 ಮಂದಿ ನೋಂದಣಿ ಮಾಡಿಕೊಂಡಿದ್ದು, ಸಂಪನ್ಮೂಲ ವ್ಯಕ್ತಿಗಳಿಂದ ವಿವಿಧ ಗೋಷ್ಠಿಗಳು ನಡೆದವು.

ಬಯೋಕೆಮಿಸ್ಟ್ರಿ ವಿಭಾಗದ ಮುಖ್ಯಸ್ಥೆ ಡಾ. ಸಬಾ ನಾರ್ಯುನೀನ್ ಸ್ವಾಗತಿಸಿದರು. ಕಮ್ಯುನಿಟಿ ಮೆಡಿಸಿನ್ ವಿಭಾಗದ ಮುಖ್ಯಸ್ಥೆ ಡಾ. ಶಹನಾಜ ವಂದಿಸಿದರು. ಡಾ. ಮೆಹಜಬೀನ್ ಕಾರ್ಯಕ್ರಮ ನಿರೂಪಿಸಿದರು.

ಕೆಬಿಎನ್ ಆಸ್ಪತ್ರೆಯ ಅಧೀಕ್ಷಕ ಡಾ. ಸಿದ್ದಲಿಂಗ ಚೆಂಗಟಿ, ವಿದ್ಯಾರ್ಥಿ ಕಲ್ಯಾಣ ಡೀನ್ ಡಾ. ಅನೂಪ್ ದೇಸಾಯಿ, ಡಾ. ಸನಾ ನಿಜಾಮಿ, ಡಾ. ಸಿದ್ದೇಶ ಶೀರ್ವಾರ, ಡಾ. ಸುನಿಲ್ ದೇಶಮುಖ್, ಡಾ. ಬಿಲಾಲ್, ಡಾ. ಫಯೀಮ್, ಡಾ. ತಾಜಾಮುಲ್ಲಾ, ಡಾ. ಖುಸ್ರೋ ಅನ್ಸಾರಿ, ಡಾ. ಅತೀಫ್, ಡಾ. ಆಶಾ, ಡಾ. ಶಿಫಾ, ಸೇರಿದಂತೆ ವಿಜ್ಞಾನ ನಿಕಾಯದ ಉಪನ್ಯಾಸಕರು ಉಪಸ್ಥಿತರಿದ್ದರು.

ಆ.28ರಂದು ಶ್ರೀ ನುಲಿಯ ಚಂದಯ್ಯ ಜಯಂತಿ ಆಚರಣೆಗೆ ಸಿದ್ಧತೆ

ಕಲಬುರಗಿ,ಆ.15-

ಪ್ರತಿ ವರ್ಷದಂತೆ ಈ ವರ್ಷವೂ ಶ್ರೀ ನುಲಿಯ ಚಂದಯ್ಯ ಜಯಂತಿಯನ್ನು ಆ.28ರಂದು ಅರ್ಥಪೂಣರ್ವಾಗಿ ಹಾಗೂ ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಲಾಗಿದೆ.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಜಯಂತಿಯ ಪೂರ್ವಭಾವಿ ಸಭೆಯಲ್ಲಿ ಕಾರ್ಯಕ್ರಮದ ಸಿದ್ಧತೆಗಳ ಕುರಿತು ಚರ್ಚಿಸಲಾಯಿತು. ಜಿಲ್ಲಾಧಿಕಾರಿ ಕಚೇರಿ ಸಹಾಯಕರಾದ ಶಿವಪ್ರಭು ಹಿರೇಮಠ ಅಧ್ಯಕ್ಷತೆ ವಹಿಸಿದ್ದರು.

ಆ.28ರಂದು ಮಧ್ಯಾಹ್ನ 12 ಗಂಟೆಗೆ ನಗರದ ಡಾ. ಎಸ್.ಎಂ. ಪಂಡಿತ ರಂಗಮಂದಿರದಲ್ಲಿ ಜಯಂತಿ ಕಾರ್ಯಕ್ರಮ ಆಯೋಜಿಸಲಾಗುವುದು. ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಶಿವಪ್ರಭು ಹಿರೇಮಠ ಮನವಿ ಮಾಡಿದರು.

ಜಯಂತಿಯ ಅಂಗವಾಗಿ ಅಂದು ಬೆಳಿಗ್ಗೆ 9 ಗಂಟೆಗೆ ಜಿಲ್ಲೆಯ ಎಲ್ಲ ಜಿಲ್ಲಾ ಹಾಗೂ ತಾಲೂಕು



ಮಟ್ಟದ ಸರ್ಕಾರಿ ಕಚೇರಿಗಳು, ಶಾಲಾ-ಕಾಲೇಜುಗಳಲ್ಲಿ ಜಯಂತಿ ಆಚರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.

ಕಾರ್ಯಕ್ರಮದಲ್ಲಿ ಶ್ರೀ ನುಲಿಯ ಚಂದಯ್ಯ ಅವರ ಜೀವನ, ಸಾಧನೆ ಹಾಗೂ ಸಮಾಜಕ್ಕೆ ನೀಡಿದ ಕೊಡುಗೆ ಕುರಿತು ಉಪನ್ಯಾಸ ಆಯೋಜಿಸಲು ತೀರ್ಮಾನಿಸಲಾಯಿತು. ಕಾರ್ಯಕ್ರಮದ ಸ್ಥಳದಲ್ಲಿ ಕುಡಿಯುವ ನೀರು, ಸ್ವಚ್ಛತೆ ಹಾಗೂ ನೈರ್ಮಲ್ಯಕ್ಕೆ ಅಗತ್ಯ ವ್ಯವಸ್ಥೆ ಕಲ್ಪಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು.

ಸಭೆಯಲ್ಲಿ ಶ್ರೀಮಂತ ಎಲ್. ಜಾಧವ್ ಅವರನ್ನು ಜಯಂತಿ ಸಮಿತಿ ಅಧ್ಯಕ್ಷರನ್ನಾಗಿ ಹಾಗೂ ಶಿವರಂಜನ್ ಸತ್ಯಂಪೇಟ ಅವರನ್ನು ಉಪನ್ಯಾಸಕರನ್ನಾಗಿ ಆಯ್ಕೆ ಮಾಡಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕಿ ಜಗದೀಶ್ವರಿ ನಾಸಿ ಮಾತನಾಡಿ, ಶಿಷ್ಟಾಚಾರದಂತೆ ಪತ್ರಿಕಾ ಆಮಂತ್ರಣ ಮುದ್ರಿಸಲಾಗುವುದು. ಕಾರ್ಯಕ್ರಮದಲ್ಲಿ ನಾಡಗೀತೆ ಹಾಗೂ ಸಂಗೀತ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಸಮಾಜದ ಮುಖಂಡರಾದ ಹಣಮಂತ ಭಜಂತ್ರಿ, ವಿಷ್ಣು ಭಜಂತ್ರಿ, ರಮೇಶ್ ಜಾಧವ್, ಸುನಿಲ್ ಮಾನ್ಪಡೆ, ಮಂಜುಳಾ ಭಜಂತ್ರಿ, ಮಹಾದೇವಿ ಭಜಂತ್ರಿ, ಭೀಮರಾವ ಭಜಂತ್ರಿ, ಸಿದ್ದಲಿಂಗ, ಜಗನ್ನಾಥ, ಶಿವಕುಮಾರ್ ಸೇರಿದಂತೆ ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

ಬೊಬ್ಬಕುಂಟಾ ಶಾಲೆಯಲ್ಲಿ ವಿಶ್ವ ಬಾಯಿ ಸ್ವಚ್ಛತಾ ದಿನ: ಒಸಡು ರೋಗ ಹಾಗೂ ಬಾಯಿಯ ಆರೋಗ್ಯ ನಿರ್ವಹಣೆ ಜಾಗೃತಿ ಕಾರ್ಯಕ್ರಮ



ಬಳ್ಳಾರಿ,ಆ.15-

ವಿಶ್ವ ಬಾಯಿ ಸ್ವಚ್ಛತಾ ದಿನದ ಅಂಗವಾಗಿ ಬಳ್ಳಾರಿ ಪಶ್ಚಿಮ ವಲಯದ ಬೊಬ್ಬಕುಂಟಾದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಒಸಡು ರೋಗಗಳು ಮತ್ತು ಬಾಯಿಯ ಆರೋಗ್ಯ ನಿರ್ವಹಣೆ' ಕುರಿತು ಬಳ್ಳಾರಿಯ ಬಿಎಂಸಿಆರ್‌ಸಿ ಸಂಸ್ಥೆಯ ಸರ್ಕಾರಿ ದಂತ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ವಸಡು ರೋಗ (ಪಿರಿಯೊಡಾಂಟಿಕ್ಸ್) ವಿಭಾಗದ ವತಿಯಿಂದ ಶುಕ್ರವಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಶಾಲಾ ಹಂತದಲ್ಲೇ ಮಕ್ಕಳಿಗೆ ಬಾಯಿಯ ನೈರ್ಮಲ್ಯ ಹಾಗೂ ಒಸಡುಗಳ ಆರೋಗ್ಯದ ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಹಮ್ಮಿಕೊಳ್ಳಲಾಗಿದ್ದ ಈ ಕಾರ್ಯಕ್ರಮದಲ್ಲಿ ಸುಮಾರು 90 ಶಾಲಾ ವಿದ್ಯಾರ್ಥಿಗಳು ಮತ್ತು 10ಕ್ಕೂ ಹೆಚ್ಚು ಶಿಕ್ಷಕ ವೃಂದದವರು ಸಕ್ರಿಯವಾಗಿ ಭಾಗವಹಿಸಿದ್ದರು.

ವೈದ್ಯರ ತಂಡವು ಬಾಯಿಯ ನೈರ್ಮಲ್ಯ ಕಾಪಾಡಿಕೊಳ್ಳುವ ಸೂಕ್ತ ವಿಧಾನಗಳು ಮತ್ತು ಒಸಡು ರೋಗಗಳಿಂದ ಬಾರಬಹುದಾದ ತೊಂದರೆಗಳ ಕುರಿತು ಉಪಯುಕ್ತ ಮಾಹಿತಿ ನೀಡಿತು.

ಕಾರ್ಯಕ್ರಮದಲ್ಲಿ ವಸಡು ರೋಗ ವಿಭಾಗದ ಮುಖ್ಯಸ್ಥೆ ಹಾಗೂ ಪ್ರಾಧ್ಯಾಪಕಿ ಡಾ. ಭಾರತಿ ಎಸ್. ಎಚ್., ಸಹಾಯಕ ಪ್ರಾಧ್ಯಾಪಕರಾದ ಡಾ. ರಾಧಿಕಾ ಕೆ.ಬಿ. ಹಾಗೂ ಡಾ. ಶ್ವೇತಾ ವಿ. ಜಲ್ಲಿ ಅವರು ಭಾಗವಹಿಸಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ಹೈಜಿನಿಸ್ಟ್ ದೀಪಾ ಹಾಗೂ ಇಂಟರ್ನ್‌ಗಳಾದ ದೇವಿಕಾ, ಜ್ಯೋತಿ ಮತ್ತು ಅಂಜಲಿಪ್ರಿಯಾ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಬ್ರಶಿಂಗ್ ತಂತ್ರಗಳು ಮತ್ತು ದಿನನಿತ್ಯದ ಬಾಯಿಯ ಆರೈಕೆಯ ಕುರಿತು ವಿದ್ಯಾರ್ಥಿಗಳಿಗೆ ಪ್ರಾತ್ಯಕ್ಷಿಕೆ ಮೂಲಕ ಅರಿವು ಮೂಡಿಸಿದರು.

ಯುವಜನರಲ್ಲಿ ಎಚ್‌ಐವಿ/ಏಡ್ಸ್ ಕುರಿತು ವೈಜ್ಞಾನಿಕ ಅರಿವು ಅಗತ್ಯ : ಡಾ.ಶರಣಬಸಪ್ಪ ಕ್ಯಾತನಾಳ

ಕಲಬುರಗಿ,ಆ.15-

ಯುವಜನರಲ್ಲಿ ಎಚ್‌ಐವಿ/ಏಡ್ಸ್ ಕುರಿತು ವೈಜ್ಞಾನಿಕ ಅರಿವು ಮೂಡಿಸುವುದರ ಜೊತೆಗೆ ರೋಗದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ನಿವಾರಿಸುವುದು ಅತ್ಯಂತ ಅಗತ್ಯವಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಶರಣಬಸಪ್ಪ ಕ್ಯಾತನಾಳ ಹೇಳಿದರು.

ನಗರದ ಶರಣಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ತಡೆಗಟ್ಟುವ ಘಟಕ ಹಾಗೂ ರೆಡ್ ರಿಬ್ಬನ್ ಕ್ಲಬ್ ಸಂಯುಕ್ತ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಯುವ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಏಡ್ಸ್ ಜಾಗೃತಿ ಮಾಸಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಯುವಜನರಲ್ಲಿ ಆರೋಗ್ಯದ ಕುರಿತು ಜಾಗೃತಿ ಮೂಡಿಸುವುದು ಹಾಗೂ ಎಚ್‌ಐವಿ ಸೋಂಕಿನ ಬಗ್ಗೆ



ವೈಜ್ಞಾನಿಕ ಮಾಹಿತಿ ನೀಡುವ ಉದ್ದೇಶದಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಸಂದರ್ಭದಲ್ಲಿ ಎಚ್‌ಐವಿ/ಏಡ್ಸ್ ಜಾಗೃತಿ ಪೋಸ್ಟರ್‌ನ್ನು ಬಿಡುಗಡೆ ಮಾಡಲಾಯಿತು.

ರೀಲ್ಸ್ ಮೇಕಿಂಗ್ ಸ್ಪರ್ಧೆ: ಏಡ್ಸ್ ಜಾಗೃತಿ ಕುರಿತು ಆಯೋಜಿಸಿದ್ದ ರೀಲ್ಸ್ ಮೇಕಿಂಗ್ ಸ್ಪರ್ಧೆಯಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಬಿ.ಡಿ.ಎ. ಎಂಜಿನಿಯರಿಂಗ್ ಕಾಲೇಜಿನ ಸಾಕ್ಷಿ ಲಾತೂರ್‌ಕರ್ ಪ್ರಥಮ ಬಹುಮಾನ ಪಡೆದು 3,000 ರೂ. ನಗದು, ಪ್ರಶಸ್ತಿ ಪತ್ರ ಹಾಗೂ ಪದಕ ಸ್ವೀಕರಿಸಿದರು. ಸಿದ್ಧಾರ್ಥ ಕಾನೂನು ಕಾಲೇಜಿನ ವಿದ್ಯಾರ್ಥಿ ದ್ವಿತೀಯ ಬಹುಮಾನವಾಗಿ 2,000 ರೂ. ಹಾಗೂ ಶರಣಬಸವೇಶ್ವರ ವಿಜ್ಞಾನ ಮಹಾವಿದ್ಯಾಲಯದ ದೀಪಿಕಾ ತೃತೀಯ ಬಹುಮಾನವಾಗಿ 1,000 ರೂ. ನಗದು, ಪ್ರಶಸ್ತಿ ಪತ್ರ ಹಾಗೂ ಪದಕ ಪಡೆದರು.

ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ತಡೆಗಟ್ಟುವ ಘಟಕದ ಅಧಿಕಾರಿ ಡಾ. ಮಹಮ್ಮದ್ ಗಫರ್ ಮಾತನಾಡಿ, ಎಚ್‌ಐವಿ/ಏಡ್ಸ್ ಹರಡುವಿಕೆ, ಸಮಾಜದಲ್ಲಿರುವ ತಪ್ಪು ಕಲ್ಪನೆಗಳು ಹಾಗೂ ಜಾಗೃತಿ ಮೂಡಿಸುವ ಅಗತ್ಯದ ಕುರಿತು ಮಾಹಿತಿ ನೀಡಿದರು. ಯುವ ಸಮೂಹಕ್ಕೆ ಸರಿಯಾದ ಮಾಹಿತಿ ತಲುಪಿಸುವಲ್ಲಿ ಐಸಿಟಿಸಿ ಕೇಂದ್ರಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂದರು.

ಜಿಲ್ಲಾ ಮೇಲ್ವಿಚಾರಕ ಮಲ್ಲಿಕಾರ್ಜುನ ಬಿರಾದಾರ್ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ, ಎಚ್‌ಐವಿ/ಏಡ್ಸ್ ಹರಡುವ ಪ್ರಮುಖ ಮಾರ್ಗಗಳು ಹಾಗೂ ಸಂಬಂಧಿಸಿದ ಅಂಕಿ-ಅಂಶಗಳ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ಓಂಪ್ರಕಾಶ್ ಮಾತನಾಡಿ, ಯುವಕರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ರೆಡ್ ರಿಬ್ಬನ್ ಕ್ಲಬ್ ಸಂಯೋಜಕಿ ಡಾ. ಅಶ್ವಿನಿ, ಯೂತ್ ರೆಡ್ ಕ್ರಾಸ್ ಸಂಯೋಜಕ ಪವನ್ ಮೋಹನ್ ರಾವ್ ಸೇರಿದಂತೆ ಸಿಬ್ಬಂದಿ, ಎನ್‌ಎಸ್‌ಎಸ್, ರೆಡ್ ರಿಬ್ಬನ್ ಕ್ಲಬ್ ಹಾಗೂ ಯೂತ್ ರೆಡ್ ಕ್ರಾಸ್‌ನ ಸ್ವಯಂಸೇವಕರು ಭಾಗವಹಿಸಿದ್ದರು. ವಿದ್ಯಾರ್ಥಿನಿ ಬೋಧಿ ಪ್ರಾಪ್ತಿ ಹುಗ್ಗಿ ನಿರೂಪಿಸಿದರು. ಚೈತ್ರಾ ಸುರೇಶ್ ವಂದಿಸಿದರು.

ಒಂದನೇಯ ಪುಟದಿಂದ

ಬಿಚ್ಚಾಲಿ ಗ್ರಾಮದಲ್ಲಿ ಹೊರಗಿನ ಕಿಟಗೇಡಿಗಳಿಂದ ಗಲಾಟೆ, ಯಾವ ಧರ್ಮವು ಎತ್ತಿ ಕಟ್ಟಿ ರಾಜಕೀಯ ಮಾಡಿಲ್ಲ, ಶಾಸಕ ದದ್ದಲ್

ಬೇಡಿಕೆಯಂತೆ ಕಟ್ಟಿಕೊಡಲಾಗಿದೆ. ನನ್ನ ಅವಧಿಯಲ್ಲಿ ನಿರ್ಮಾಣವಾದಷ್ಟು ಮಂದಿರಗಳು ಯಾರ ಅವಧಿಯಲ್ಲಿಯೂ ಆಗಿಲ್ಲ. ಹಿಂದಿನ ಯಾವ ಪಕ್ಷದ ಶಾಸಕರು ನಿರ್ಮಾಣ ಮಾಡಿದ್ದಾರೆ ಸಾಬೀತು ಪಡಿಸಲಿ ಎಂದು ಸವಾಲು ಹಾಕಿದರು. ಎಲ್ಲಾ ಮಂತ್ರಿಗಳನ್ನು 50 ಲಕ್ಷದಿಂದ ಒಂದು ಕೋಟಿ ವರೆಗೆ ಖರ್ಚು ಮಾಡಿ ಸುಸಜ್ಜಿತವಾಗಿ ಕಟ್ಟಲಾಗಿದೆ.. ಸದ್ಯದಲ್ಲೇ ಐತಿಹಾಸಿಕ ಮತ್ತು ಪುರಾಣ ಪ್ರಸಿದ್ಧ ಗಾಣಧಾಳ ಗ್ರಾಮದ ಆಂಜನೇಯ ಮತ್ತು ದೇವಸೂಗೂರ ಶ್ರೀ ಸೂಗೂರೇಶ್ವರ ದೇವಸ್ಥಾನದಲ್ಲಿ ಅನ್ನದಾಸೋಹದ ಅಡುಗೆ ಕೋಣೆ ಸೇರಿ ಇದರ ಅಭಿವೃದ್ಧಿ ಕಾರ್ಯಗಳು ನಡೆಯಲಿವೆ ಎಂದು ನುಡಿದರು. ನಾನು ಹಿಂದೂ ಮತದವನಾಗಿದ್ದೇನೆ. ಹಿಂದೂತ್ವವನ್ನು ಯಾರಿಂದಲೂ ಕಲಿಯಬೇಕಾದ ಅವಶ್ಯಕತೆ ನನಗಿಲ್ಲ. ಮನೆಯಲ್ಲಿ ದೇವರ ಪೂಜೆ ಮಾಡುವ ತನಕ ಹೊಸ್ತಿಲು ಹೊರಗೆ ಕಾಲಿಡುವುದಿಲ್ಲ. ನಮ್ಮ ಮನೆಯಲ್ಲಿ ಉತ್ತಮ ಸಂಸ್ಕಾರ ಶಿಕ್ಷಣ ಕೊಟ್ಟಿದ್ದಾರೆ ಎಂದರು. ಗ್ರಾಮದಲ್ಲಿ ಸದ್ಯ ಶಾಂತಿ ನೆಲೆಸಿದೆ ಶಾಂತಿ ಕದಡದಂತೆ ನಿಷೇದಾಜ್ಞೆ ಹಾಕಲಾಗಿದೆ. ಸ್ವಲ್ಪ ದಿನದರಲ್ಲೇ ಎಲ್ಲವೂ ಸರಿ ಹೋಗುತ್ತದೆ. ಶಾಂತಿ ಸಭೆಯು ನಡೆಸುತ್ತೇನೆ ಎಂದರು

ರೈತರಿಗೆ ಪರಿಹಾರ ಒದಗಿಸಲು ಮುಖ್ಯಮಂತ್ರಿಗಳೊಂದಿಗೆ ಸಮಾಲೋಚನೆ: ಸಣ್ಣ ನೀರಾವರಿ ಸಚಿವ ಡಾ.ಅಜಯ್ ಧರ್ಮಸಿಂಗ್

ಮೇಲಿದೆ ಎಂದರು.

ಅನುದಾನ ಹಂಚಿಕೆ ಮತ್ತು ಅಭಿವೃದ್ಧಿ: ಡಾ. ನಂಜುಡಪ್ಪ ವರದಿ ಹಾಗೂ ಪ್ರೊ. ಗೋವಿಂದರಾವ್ ಸಮಿತಿ ವರದಿಯ ಕಾಂಪ್ರಹೆನ್ಸಿವ್ ಕಾಂಪೊಸಿಟ್ ಡೆವಲಪ್ಮೆಂಟ್ ಇಂಡೆಕ್ಸ್ ಆಧಾರದ ಮೇಲೆಯೇ ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಅನುದಾನ ಹಂಚಿಕೆಯಾಗುತ್ತದೆ. ರಾಯಚೂರು ಜಿಲ್ಲೆಯ ವಿಶ್ವವಿದ್ಯಾಲಯಕ್ಕೆ ಅಗತ್ಯ ಅನುದಾನ ನೀಡಲಾಗಿದ್ದು, ಯಾವುದೇ ತಾರತಮ್ಯ ಮಾಡದೆ ರಾಯಚೂರು, ಕಲ್ಯಾಣ ಕರ್ನಾಟಕ ಹಾಗೂ ಇಡೀ ರಾಜ್ಯದ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು.

ಕಲ್ಯಾಣ ಕರ್ನಾಟಕ ಭಾಗದ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳನ್ನು ಮಹಾತ್ವಕಾಂಕ್ಷಿ ಜಿಲ್ಲೆಗಳೆಂದು ಘೋಷಿಸಲಾಗಿದೆ. ಕೇಂದ್ರ ಸರ್ಕಾರದಿಂದ ಕಳೆದ ಕೆಲ ವರ್ಷಗಳಿಂದ ಸರಿಯಾಗಿ ಅನುದಾನ ಬಂದಿಲ್ಲ. ಈ ಬಗ್ಗೆ ಮುಖ್ಯಮಂತ್ರಿಗಳ ಬಳಿ ನಿಯೋಗ ಕರೆದೊಯ್ದುದ ನಂತರ ನವದೆಹಲಿಗೂ ತೆರಳಿ ಕೇಂದ್ರ ಸರ್ಕಾರದ ಗಮನ ಸೆಳೆಯಲಾಗುವುದು ಎಂದರು.

ಕರ್ತವ್ಯ ಲೋಪ ಎಸಗುವವರ ಮೇಲೆ ಕ್ರಮ: ಇತ್ತೀಚೆಗೆ ಜಿಲ್ಲೆಯ ಸಿಂಧನೂರು ವ್ಯಾಪ್ತಿಯಲ್ಲಿ ವಸತಿ ನಿಲಯದಲ್ಲಿ ಆದ ಘಟನೆಗೆ ಸಂಬಧಿಸಿದತೆ ಈಗಾಗಲೇ ವಾರ್ಡನ್ ಹಾಗೂ ಹೆಡ್ ಕುಕ್ ಅವರನ್ನು ಅಮಾನತು ಮಾಡಲಾಗಿದೆ. ಇಂತಹ ಪ್ರಕರಣಗಳು ಮರುಕಳಿಸದಂತೆ ಎಲ್ಲಾ ಕಡೆ ಭೇಟಿ ನೀಡಿ ಪರಿಶೀಲಿಸಲಾಗುವುದು ಹಾಗೂ ಕರ್ತವ್ಯ ಲೋಪ ಎಸಗುವವರ ಮೇಲೆ ತಕ್ಷಣ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಸಚಿವರು ಸ್ಪಷ್ಟಪಡಿಸಿದರು.

ಡಾ. ನಂಜುಡಪ್ಪ ವರದಿ ಮೇಲೆ ಅನುದಾನ ಹಂಚಿಕೆ: ಡಾ.ನಂಜುಡಪ್ಪ ವರದಿಯ ಆಧಾರದ ಮೇಲೆ ಹಿಂದುಳಿದ ತಾಲೂಕುಗಳ ಅಭಿವೃದ್ಧಿಗೆ ಸಿಡಿಐ ಸೂಚ್ಯಂಕದತೆ ಅನುದಾನ ಹಂಚಿಕೆ ಮಾಡಲಾಗುತ್ತಿದೆ. ರಾಯಚೂರು ಹಾಗೂ ಕಲ್ಬುರ್ಗಿ ನಗರ ಮಟ್ಟದ ಅಭಿವೃದ್ಧಿಗೆ ಸಂಬಧಿಸಿದತೆ ಕೆಲವು ತಾಲೂಕುಗಳಿಗೆ ಅನುದಾನ ಹಂಚಿಕೆಯಲ್ಲಿ ವ್ಯತ್ಯಾಸವಾಗಿರುವುದು ಮತ್ತು ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಪ್ರೊ.ಗೋವಿಂದರಾವ್ ಅವರ ವರದಿಯ ಉಲ್ಲೇಖಗಳನ್ನೂ ಪರಿಶೀಲಿಸಿ, ಗ್ರಾಮೀಣ ಹಾಗೂ ತಾಲೂಕು ಮಟ್ಟದ ಅಸಮತೋಲನವನ್ನು ಸರಿಪಡಿಸಲು ಸರ್ಕಾರಿ ಮಟ್ಟದಲ್ಲಿ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ಬೆಳೆ ಹಾನಿ ಮತ್ತು ಫಸಲ್ ಭೀಮಾ ಯೋಜನೆ: ಫಸಲ್ ಭೀಮಾ ಯೋಜನೆಯಡಿ ರೈತರಿಗೆ ಬೆಳೆ ನಷ್ಟ ಪರಿಹಾರ ಸಿಗದಿರುವ ಕುರಿತು ಮಾಧ್ಯಮದವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, ಮಧ್ಯಂತರ ಬೆಳೆ ಹಾನಿ ನಿಯಮಗಳ ಪ್ರಕಾರ ಶೇಕಡಾ 25 ರಷ್ಟು ಪರಿಹಾರ ಹಣವನ್ನು ಬಿಡುಗಡೆ ಮಾಡಲು ಸರ್ಕಾರದಿಂದ ಅಗತ್ಯ ಕ್ರಮ ವಹಿಸಲಾಗುವುದು. ನಮ್ಮ ಸರ್ಕಾರದ ಅವಧಿಯಲ್ಲಿ ಯಾವುದೇ ಕಾರಣಕ್ಕೂ ಅನಧಿಕೃತ ಒತ್ತುವರಿಗೆ ಅವಕಾಶ ನೀಡುವುದಿಲ್ಲ. ಅಗತ್ಯ ಮಾಹಿತಿ ತರೆಸಿಕೊಂಡು ಸೂಕ್ತ ಹೆಜ್ಜೆ ಇಡಲಾಗುವುದು ಎಂದರು.

ಇದೇ ಸಂದರ್ಭದಲ್ಲಿ ಇದೇ ಸಂದರ್ಭದಲ್ಲಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಎ.ವಸಂತಕುಮಾರ, ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಸು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಸೇರಿದಂತೆ ಇತರರು ಇದ್ದರು.

ಗ್ರಾಮೀಣ ಭಾಗದ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಟೂರ್ನಿ ಆಯೋಜನೆ: ಕುಮಾರ್ ಬಂಗಾರಪ್ಪ

ಮಹಾತ್ಮ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ 6 ಕೋರ್ಟ್ಗಳಲ್ಲಿ ರಾಷ್ಟಿಯ ಮಟ್ಟದ ಮಾನದಂಡಗಳಿಗೆ ಅನುಗುಣವಾಗಿ ಈ ಪಂದ್ಯಾವಳಿಗಳು ನಡೆಯಲಿವೆ ಎಂದರು.

ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಬೆಂಬಲ: ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಅಜಯ್ ಧರಂಸಿಗ್ ಸೇರಿದಂತೆ ಜಿಲ್ಲೆಯ ಶಾಸಕರು, ಜನಪ್ರತಿನಿಧಿಗಳು, ಜಿಲ್ಲಾಧಿಕಾರಿಗಳು, ಸಿಇಓ ಹಾಗೂ ಎಸ್ಪಿ ಮತ್ತು ಸ್ಥಳೀಯ ಬ್ಯಾಡ್ಮಿಂಟನ್ ಸಂಸ್ಥೆಯ ಪದಾಧಿಕಾರಿಗಳು ಈ ಪಂದ್ಯಾವಳಿಯ ಯಶಸ್ಸಿಗೆ ಪೂರ್ಣ ಸಹಕಾರ ನೀಡಲಿದ್ದಾರೆ. ಈ ಪಂದ್ಯಾವಳಿಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡುವ ಕ್ರೀಡಾಪಟುಗಳು ಮುಂದಿನ ದಿನಗಳಲ್ಲಿ ರಾಷ್ಟಿಯ ಹಾಗೂ ಅಂತರರಾಷ್ಟಿಯ ಮಟ್ಟದ ಪಂದ್ಯಾವಳಿಗಳಲ್ಲಿ ಭಾಗವಹಿಸಲು ಅರ್ಹತೆ ಪಡೆಯಲಿದ್ದಾರೆ ಎಂದರು.

ಈ ವೇಳೆ ಟೂರ್ನಿಯ ಅಧಿಕೃತ ಲೋಗೋ ಬಿಡುಗಡೆ ಮಾಡಿ, ರಾಯಚೂರಿನ ಕ್ರೀಡಾಭಿಮಾನಿಗಳು ಹಾಗೂ ಸಾರ್ವಜನಿಕರು ಈ ಕ್ರೀಡಾ ಹಬ್ಬಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕೆಂದು ಕೋರಿದರು.

ಇದೇ ಸಂದರ್ಭದಲ್ಲಿ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಅಜಯ್ ಧರ್ಮಸಿಂಗ್, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಎ.ವಸಂತಕುಮಾರ, ಮಾಜಿ ಸಂಸದರಾದ ಬಿ.ವಿ.ನಾಯಕ, ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಸು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಸೇರಿದಂತೆ ಇತರರು ಇದ್ದರು.

ಅಸೋಸಿಯೇಷನ್‌ನಿಂದ 20ನೇ ವರ್ಷದ ಮಧ್ಯರಾತ್ರಿ ಸ್ವಾತಂತ್ರ್ಯೋತ್ಸವ

ಮಹನೀಯರ ತ್ಯಾಗವನ್ನು ಸ್ಮರಿಸುವುದರ ಜೊತೆಗೆ, ಅವರ ಆದರ್ಶಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಉದ್ದೇಶದಿಂದ ಅಸೋಸಿಯೇಷನ್ ವತಿಯಿಂದ ಪ್ರತಿವರ್ಷ ಈ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.

''ಸ್ವಾತಂತ್ರ್ಯವೆಂದರೆ ಕೇವಲ ಆಚರಣೆಯಲ್ಲ; ಅದು ನಮ್ಮ ಜವಾಬ್ದಾರಿ ಮತ್ತು ದೇಶದ ಮೇಲಿನ ಕರ್ತವ್ಯದ ನೆನಪು'' ಎಂಬ ಸಂದೇಶವನ್ನು ಯುವಜನತೆಗೆ ಸಾರುವ ರೀತಿಯಲ್ಲಿ ಕಾರ್ಯಕ್ರಮ ನಡೆಯಿತು. ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ರಾಷ್ಟ್ರಧ್ವಜಕ್ಕೆ ಗೌರವ ಸಲ್ಲಿಸಿ, ದೇಶದ ಏಕತೆ, ಅಖಂಡತೆ ಹಾಗೂ ಪ್ರಗತಿಗಾಗಿ ತಮ್ಮ ಬದ್ಧತೆಯನ್ನು ವ್ಯಕ್ತಪಡಿಸಿದರು.

ಭಗತ್ ಸಿಂಗ್ ಸರ್ಕಲ್‌ನಲ್ಲಿ ಮಧ್ಯರಾತ್ರಿ 12 ಗಂಟೆಗೆ ಮೊಳಗಿದ ದೇಶಭಕ್ತಿಯ ಘೋಷಣೆಗಳು ಹಾಗೂ ರಾಷ್ಟ್ರಧ್ವಜಾರೋಹಣದ ಕ್ಷಣವು ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿತ್ತು. 20ವರ್ಷಗಳ ಈ ನಿರಂತರ ಪರಂಪರೆ ಮುಂದಿನ ಪೀಳಿಗೆಯ ಯುವಕರಿಗೂ ದೇಶಸೇವೆ ಮತ್ತು ರಾಷ್ಟ್ರಪ್ರೇಮದ ಪ್ರೇರಣೆಯಾಗಲಿ ಎಂಬ ಆಶಯವನ್ನು ಕಾರ್ಯಕ್ರಮದಲ್ಲಿ ವ್ಯಕ್ತಪಡಿಸಲಾಯಿತು.

ಈ ಸಂದರ್ಭದಲ್ಲಿ ರಾಜೇಂದ್ರ, ಹರ್ವಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಜಿಲ್ಲಾ ಕಾರ್ಯವಾಹರು,ಎನ್.ವಿನಾಯಕ್ ರಾವ್ ವೀರ ಸಾವರ್ಕರ್ ಯೂಥ್ ಅಸೋಸಿಯೇಷನ್‌ನ ಸಂಸ್ಥಾಪಕರು,ವೆಂಕಟೇಶ್ ,ಶ್ರೀಪಾಲ್ ಕೋಟರಿ ,ಶರಣಪ್ಪ ದೋತರಬಂಡಿ ಹಾಗೂ ಸಂಘದ ಪದಾಧಿಕಾರಿಗಳು, ಯುವ ಕಾರ್ಯಕರ್ತರು, ಪ್ರಮುಖ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು. ''ಭಾರತ ಮಾತಾ ಕೀ ಜೈ'', ''ವಂದೇ ಮಾತರಂ'' ಸೇರಿದಂತೆ ದೇಶಭಕ್ತಿಯ ಘೋಷಣೆಗಳೊಂದಿಗೆ ಕಾರ್ಯಕ್ರಮವು ಅರ್ಥಪೂರ್ಣವಾಗಿ ನೆರವೇರಿತು.

ಭಾರತ ಭಾಗ್ಯ ವಿಧಾತ ಬಾಬಾಸಾಹೇಬ ಅಂಬೇಡ್ಕರರ ಸಾವಿಧಾನಿಕ ಮಾರ್ಗದಲ್ಲಿ ಸ್ವತಂತ್ರ ಭಾರತವನ್ನು ಮುನ್ನಡೆಸೋಣ-ಪ್ರೊ.ಕರಿಗೂಳಿ

ಹೇಳಿದರು,ಸ್ವತಂತ್ರ ಭಾರತವನ್ನು ಸಾವಿಧಾನಿಕ ಮಾರ್ಗದಲ್ಲಿ ನಡೆಸಲು ಎಲ್ಲರೂ ಸನ್ನದ್ದರಾಗಬೇಕೆಂದು ಕರೆನೀಡಿದರು.

ಈ ಕಾರ್ಯಕ್ರಮದಲ್ಲಿ ಅಧ್ಯಾಪಕರಾದ ವೀರೇಶ್, ಡಾ.ವಿರೂಪಾಕ್ಷ.ಕೆ, ರವಿಕುಮಾರ, ಡಾ.ಶಶಿಕುಮಾರ,

ಅತಿಥಿ ಉಪನ್ಯಾಸಕರಾದ ದೇವರಾಜ್, ಈಶಪ್ಪ,ಆಡಳಿತ ಸಿಬ್ಬಂದಿಯಾದ ಜಬೀನಾ ಬೇಗಂ, ವಿನಾಯಕ ಹಾಗೂ ಸಹಾಯಕ ಸಿಬ್ಬಂದಿ ಉಪಸ್ಥಿತರಿದ್ದರು.

ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ 5-10 ವರ್ಷದ ವೈಜ್ಞಾನಿಕ ಕ್ರಿಯಾ ಯೋಜನೆಗೆ ಆಗ್ರಹ

ಕಲಬುರಗಿ,ಆ.15-

ಕಲ್ಯಾಣ ಕರ್ನಾಟಕ ಪ್ರದೇಶದ ಸಮಗ್ರ ಹಾಗೂ ಸಮತೋಲ ಅಭಿವೃದ್ಧಿಗೆ ಸರ್ಕಾರವು 5ರಿಂದ 10 ವರ್ಷಗಳ ದೂರದೃಷ್ಟಿಯೊಂದಿಗೆ ಕಾಲಮಿತಿಯ ವೈಜ್ಞಾನಿಕ ಕ್ರಿಯಾ ಯೋಜನೆ ರೂಪಿಸಿ ಅನುಷ್ಠಾನಗೊಳಿಸಬೇಕು ಎಂದು ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯ ನೇತೃತ್ವದಲ್ಲಿ ನಡೆದ ದುಂಡುಮೇಜಿನ ಸಭೆ ಆಗ್ರಹಿಸಿದೆ.

ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಾದ ಬೀದರ್ ಕಲಬುರಗಿ, ರಾಯಚೂರು, ಯಾದಗಿರಿ, ಬಳ್ಳಾರಿ, ಕೊಪ್ಪಳ ಹಾಗೂ ವಿಜಯನಗರ ಜಿಲ್ಲೆಗಳ ತಜ್ಞರು, ಚಿಂತಕರು, ಬುದ್ಧಿಜೀವಿಗಳು, ಅಭಿವೃದ್ಧಿಪರ ಹೋರಾಟಗಾರರು ಹಾಗೂ ವಿವಿಧ ಕ್ಷೇತ್ರಗಳ ಗಣ್ಯರು ಭಾಗವಹಿಸಿದ್ದ ಸಭೆ ಶುಕ್ರವಾರ ಕಲಬುರಗಿಯ ಶರಣಬಸವ ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ನಡೆಯಿತು.

ಸಭೆಯಲ್ಲಿ ನಂಜುಂಡಪ್ಪ ವರದಿಯ ಮಾನದಂಡಗಳು ಹಾಗೂ ಸೂಚ್ಯಂಕಗಳು ಮತ್ತು ಗೋವಿಂದರಾವ್ ನೇತೃತ್ವದ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ವರದಿಯಲ್ಲಿನ ಅಭಿವೃದ್ಧಿ ಸೂಚ್ಯಂಕಗಳು ಹಾಗೂ ಶಿಫಾರಸುಗಳ ಕುರಿತು ಸುದೀರ್ಘ ಚರ್ಚೆ ನಡೆಯಿತು. ಏಳು ಜಿಲ್ಲೆಗಳ ತಜ್ಞರು ತಮ್ಮ ಕ್ಷೇತ್ರವಾರು ಅನುಭವ ಹಾಗೂ ಸಲಹೆಗಳನ್ನು ಮಂಡಿಸಿದರು.

ರಾಯಚೂರಿನ ಅಭಿವೃದ್ಧಿಪರ ಹೋರಾಟಗಾರ ಡಾ. ರಜಾಕ್ ಉಸ್ತಾದ್ ಮಾತನಾಡಿ, ಗೋವಿಂದರಾವ್ ಸಮಿತಿಯ ವರದಿಯಲ್ಲಿ ಸ್ಪಷ್ಟತೆಯ ಕೊರತೆಯಿದ್ದು, ಅದರ ಆಧಾರದಲ್ಲಿ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವಲ್ಲಿ ದ್ವಂದ್ವ ಉಂಟಾಗುತ್ತಿದೆ. 172 ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೆ 42 ಸಾವಿರ ಕೋಟಿ ರೂ. ನಿಗದಿಪಡಿಸಿರುವುದು ಅವೈಜ್ಞಾನಿಕವಾಗಿದೆ. ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಸ್ಪಷ್ಟ ಮಾನದಂಡಗಳನ್ನು ರೂಪಿಸಿ, ಕಾಲಮಿತಿಯ ವೈಜ್ಞಾನಿಕ ಕ್ರಿಯಾ ಯೋಜನೆ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ರಾಯಚೂರಿನ ಏಮ್ಸ್ ಹೋರಾಟ ಸಮಿತಿ ಅಧ್ಯಕ್ಷ ಡಾ. ಬಸವರಾಜ ಕಳಸಾ



ಮಾತನಾಡಿ, ಏಳು ಜಿಲ್ಲೆಗಳ ಅಭಿವೃದ್ಧಿಗಾಗಿ ಪಕ್ಷಾತೀತವಾಗಿ ಎಲ್ಲ ನಾಯಕರು ಹಾಗೂ ಅಭಿವೃದ್ಧಿಪರ ಸಂಘಟನೆಗಳು ಒಗ್ಗೂಡಿ ಸರ್ಕಾರದ ಮೇಲೆ ಒತ್ತಡ ತರಬೇಕು. ಪ್ರದೇಶದ ಸರ್ವತೋಮುಖ ಅಭಿವೃದ್ಧಿಗೆ ದೂರದೃಷ್ಟಿಯ ಗಡುವಿನ ಯೋಜನೆ ರೂಪಿಸುವ ಅಗತ್ಯವಿದೆ ಎಂದರು.

ಕೊಪ್ಪಳದ ಗಂಗಾವತಿಯ ಶಿಕ್ಷಣ ತಜ್ಞ ಪ್ರೊ. ಧನರಾಜ ಮಾತನಾಡಿ, ಶೈಕ್ಷಣಿಕ ಗುಣಮಟ್ಟ ಸುಧಾರಣೆಗೆ ಕೆಳಹಂತದಿಂದಲೇ ಯೋಜನೆ ರೂಪಿಸಿ ಅನುಷ್ಠಾನಗೊಳಿಸಬೇಕು. ವಿಶೇಷವಾಗಿ ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಸರ್ಕಾರ ದಿಟ್ಟ ನಿರ್ಧಾರ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಎಚ್‌ಕೆಸಿಸಿಐ ಮಾಜಿ ಅಧ್ಯಕ್ಷ ಉಮಾಕಾಂತ ನಿಗ್ಗುಡಗಿ ಮಾತನಾಡಿ, ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ದೊರೆತಿದ್ದರೂ ಅದರ ಪರಿಣಾಮಕಾರಿ ಅನುಷ್ಠಾನ ಅಗತ್ಯವಾಗಿದೆ. ಪ್ರದೇಶದ ಸರ್ವತೋಮುಖ ಅಭಿವೃದ್ಧಿಗೆ ಕಾಲಮಿತಿಯ ಯೋಜನೆ ರೂಪಿಸುವುದರ ಜತೆಗೆ ಪ್ರತ್ಯೇಕ ಕೈಗಾರಿಕಾ ನೀತಿ ಜಾರಿಗೊಳಿಸಿ ಉದ್ಯೋಗ ಸೃಷ್ಟಿಗೆ ಒತ್ತು ನೀಡಬೇಕು ಎಂದರು.

ವಿಶ್ರಾಂತ ಕುಲಪತಿ ಪ್ರೊ. ಪ್ರತಾಪಸಿಂಗ್ ತಿವಾರಿ, ಪ್ರೊ. ಬಸವರಾಜ ಕುಮನೂರ, ಪ್ರೊ. ಆರ್.ಕೆ. ಹುಡಗಿ, ಚೇಂಬರ್ಸ್ ಆಫ್ ಕಾಮರ್ಸ್ ಕಾರ್ಯದರ್ಶಿ ಶಿವರಾಜ ಇಂಗಿನಶೆಟ್ಟಿ, ಡಾ. ಸನಾವುಲ್ಲಾ, ಡಾ. ನಿರ್ಮಲಾ ಸಜ್ಜನ, ಬೀದರಿನ ಕಾರಂಜಾ ಹೋರಾಟ ಸಮಿತಿ ಅಧ್ಯಕ್ಷ ಚಂದ್ರಶೇಖರ ಪಾಟೀಲ ಹುಚಕನಳ್ಳಿ, ಡಾ. ಮಾಜಿದ್ ದಾಗಿ, ಡಾ. ಬಿ.ಎಸ್. ಗುಲಶೆಟ್ಟಿ, ಶಿವಾನಂದ ಪಾಟೀಲ್, ರಾಯಚೂರಿನ ಅಮರೇಗೌಡ ಪಾಟೀಲ್, ವಿನಯ ಚಿತ್ರಗಾರ ಸೇರಿದಂತೆ ಹಲವರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ಮೀನಾಕ್ಷಿ ಬಾಳಿ, ಕೆ.ನೀಲಾ, ಡಾ. ಸದಾನಂದ ಪೆರ್ಲಾ, ಡಾ. ಗಾಂಧೀಜಿ ಮೋಳಕೇರೆ, ಡಾ. ಮಲ್ಲಿಕಾರ್ಜುನ ಶೆಟ್ಟಿ, ಸೈಯದ್ ರೌಫ್ ಖಾದ್ರಿ, ಮಲ್ಲಿಕಾರ್ಜುನ ಬಿ., ಅಬ್ದುಲ್ ರಹೀಂ, ಮೋಹನ ಕಟ್ಟಿಮನಿ, ಬಸವರಾಜ ಕಲ್ಯಾಣಿ, ಎಸ್.ಎಸ್. ಪಾಟೀಲ್, ರಾಜಪ್ಪ ಕಮಲಪುರ, ಡಾ. ರಾಜಶೇಖರ, ಡಾ. ಆರ್. ವೆಂಕಟರೆಡ್ಡಿ, ಪಿಡ್ಡಪ್ಪ ಜಾಲಗಾರ, ಸೇರಿದಂತೆ ನೂರಾರು ಪರಿಣಿತರು ಸಭೆಯಲ್ಲಿ ಭಾಗವಹಿಸಿದ್ದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಬಸವರಾಜ ದೇಶಮುಖ ಅವರ ಅನುಮೋದನಾ ಭಾಷಣದ ಬಳಿಕ ಸಂಸ್ಥಾಪಕ ಅಧ್ಯಕ್ಷ ಡಾ. ಲಕ್ಷ್ಮಣ ದಸ್ತಿ ಅವರು ನಿರ್ಣಯಗಳನ್ನು ಮಂಡಿಸಿದರು. ನೂರಾರು ಪರಿಣಿತರು ಹಾಗೂ ಗಣ್ಯರು ಸಭೆಯಲ್ಲಿ ಭಾಗವಹಿಸಿದ್ದರು.

ದುಂಡುಮೇಜಿನ ಸಭೆಯಲ್ಲಿ ಕೈಗೊಂಡ ನಿರ್ಣಯಗಳು : 1. 5-10 ವರ್ಷದ ದೂರದೃಷ್ಟಿಕೋನದಲ್ಲಿ ವೈಜ್ಞಾನಿಕ ಕ್ರೀಯಾಯೋಜನೆ ರೂಪಿಸಬೇಕು. 2. ಕೆಕೆಆರ್ ಡಿಬಿಯಿಂದ ನಿರ್ಲಕ್ಷಕ್ಕೊಳಗಾದ ಕ್ಷೇತ್ರ ಮತ್ತು ಗ್ರಾಮ, ತಾಲ್ಲೂಕುಗಳ ಅಭಿವೃದ್ಧಿಗೆ ವಿಶೇಷ ಒತ್ತು ಕೊಡಬೇಕು. ಪ್ರಗತಿಗೆ ಕಾರ್ಯಾಚರಣೆಯ ರೂಪದ ಪ್ರಗತಿಗೆ ಕ್ರಮ ಕೈಗೊಳ್ಳಬೇಕು. 3. ಮುಖ್ಯಮಂತ್ರಿಗಳಿಗೆ ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳ ಅಭಿವೃದ್ಧಿಪರ ನಿಯೋಗ ಭೇಟಿ ಮಾಡಲು ನಿರ್ಧರಿಸಲಾಯಿತು. 4. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಗುಳೆ ಹೋಗುವುದನ್ನು ತಪ್ಪಿಸಲು ಕೃಷಿ ಮತ್ತು ಕೃಷಿಯೇತರ ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿ ಮಾಡಲು ಯೋಜನೆ ರೂಪಿಸಬೇಕು.

5. ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ಪ್ರತ್ಯೇಕ ಕೈಗಾರಿಕಾ ನೀತಿ ಮತ್ತು ಪ್ರತ್ಯೇಕ ಕೃಷಿ ನೀತಿ ಹಾಗೂ ಶೈಕ್ಷಣಿಕ ನೀತಿಯನ್ನು ರೂಪಿಸಬೇಕು. 6. ರಾಯಚೂರಿನಲ್ಲಿ ನಡೆದಿರುವ ಏಮ್ಸ್ ಬೇಡಿಕೆಯ ಹೋರಾಟಕ್ಕೆ ಬೆಂಬಲಿಸಿ ಏಳು ಜಿಲ್ಲೆಗಳ ಹೋರಾಟಕೆ ಬೆಂಬಲಿಸಿ ಏಳು ಜಿಲ್ಲೆಗಳ ಸಚಿವರು, ಶಾಸಕರು ಸಂಘಟಿತವಾದ ರಾಜಕೀಯ ಇಚ್ಛಾಶಕ್ತಿ ವ್ಯಕ್ತಪಡಿಸಿ ಕೇಂದ್ರದ ಮೇಲೆ ಒತ್ತಡ ತರಲು ಸರ್ವಪಕ್ಷಗಳ ನಿಯೋಗ ತೆಗೆದುಕೊಂಡು ಹೋಗುವುದು. 7. ಬೀದರ್‌ನ ಕಾರಂಜಾ ಸಂತ್ರಸ್ತರ ಸಮರ್ಪಕ ಪರಿಹಾರದ ಬೇಡಿಕೆಯ ಬಗ್ಗೆ ರಾಜ್ಯ ಸರಕಾರದ ಮೇಲೆ ಒತ್ತಡ ತರಬೇಕು. 8. ಗೋವಿಂದರಾವ್ ಸಮಿತಿಯ ಶಿಫಾರಸ್ಸುಗಳಂತೆ ಮಾನವ ಅಭಿವೃದ್ಧಿವೃದ್ದಿಸಲು, ಶೈಕ್ಷಣಿಕ ಕ್ಷೇತ್ರದ ಪ್ರಗತಿಗೆ, ಕೃಷಿ, ಕೃಷಿಯೇತರ ಕ್ಷೇತ್ರಗಳ ಅಭಿವೃದ್ಧಿಗೆ ಒತ್ತು ನೀಡಬೇಕು.

9. ಗೋವಿಂದರಾವ್ ಸಮಿತಿ ಅಭಿವೃದ್ಧಿ ಯೋಜನೆಗಳಿಗೆ ಸರಕಾರ ಸ್ಪಂದಿಸಬೇಕು. 10. ಗೋವಿಂದರಾವ್ ವರದಿಯಲ್ಲಿ ಶಿಫಾರಸ್ಸು ಮಾಡಿರುವಂತೆ ಕಲಬುರಗಿ ಕ್ಷೇತ್ರದ ಅಭಿವೃದ್ಧಿ ಮತ್ತು ರೈಲ್ವೆ ವಿಭಾಗೀಯ ಕೇಂದ್ರ ಕಚೇರಿ ಸ್ಥಾಪನೆಗೆ ಕೇಂದ್ರ ಸರಕಾರದ ಮೇಲೆ ಒತ್ತಡ ತರಬೇಕು. 11. 371ನೇ(ಜೆ) ಕಲಂ ಅಡಿ ನಮ್ಮ ಪಾಲಿನ ಖಾಲಿ ಹುದ್ದೆಗಳ ಭರ್ತಿಗೆ ರಾಜ್ಯ ಸರಕಾರ ತಕ್ಷಣ ಸ್ಪಂದಿಸಿ ಭರ್ತಿ ಮಾಡಬೇಕು. ಇಲ್ಲಿನ ನೌಕರರಿಗೆ ಮುಂಬಡ್ತಿ ನೀಡಲು ಸುಸೂತ್ರವಾಗಿ ಸಿಗುವಂತೆ ಕ್ರಮ ಕೈಗೊಳ್ಳಬೇಕು. 12. ಪ್ರತಿ ವರ್ಷ ಒಂದನೇ ಜನವರಿಯಂದು 371ನೇ(ಜೆ) ಕಲಂ ಉತ್ಸವ ದಿನಾಚರಣೆ ಆಚರಿಸಲು ನಿರ್ಧರಿಸಲಾಯಿತು. 13. ಕೆಕೆಆರ್ ಡಿಬಿ ಮಂಡಳಿ ಕಾಲ ಮಿತಿಯಲ್ಲಿ ಅಧ್ಯಕ್ಷರು ಮತ್ತು ಮಂಡಳಿಯ ಸದಸ್ಯರು ಹಾಗೂ ಮೇಲ್ವಿಚಾರಣಾ ಸಮಿತಿ, ಮೌಲ್ಯಮಾಪನ ಸಮಿತಿ, ಜಾಗೃತ ದಳ ಸಮಿತಿಗಳನ್ನು ರಚಿಸಬೇಕು.

ಬೆಳೆ ವಿಮೆ ಬಿಡುಗಡೆ, ಬರ ಘೋಷಣೆಗೆ ಆಗ್ರಹಿಸಿ ಹೆದ್ದಾರಿ ತಡೆದು ರೈತರ ಪ್ರತಿಭಟನೆ

ಆಳಂದ,ಆ.15-

ಬೆಳೆ ವಿಮೆಯ ಎರಡನೇ ಕಂತಿನ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು ಹಾಗೂ ಆಳಂದ ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಬೇಕು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರೈತರು ತಾಲೂಕಿನ ಗಡಿಭಾಗದ ಖಜೂರಿ ಗ್ರಾಮದ ಕ್ರಾಸ್ ಬಳಿ ರಾಜ್ಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.



ರಸ್ತೆ ಸಂಚಾರ ತಡೆದು ಸರ್ಕಾರ ಹಾಗೂ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಪ್ರತಿಭಟನಾಕಾರರು, ಬಳಿಕ ನಾಡ ತಹಶೀಲ್ದಾರ್ ಮೂಲಕ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿ ರೈತರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುವಂತೆ ಒತ್ತಾಯಿಸಿದರು.

2025-26ನೇ ಸಾಲಿನ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿ ಖಜೂರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸುಮಾರು 3,000 ಎಕರೆ ಪ್ರದೇಶದ 1,600ಕ್ಕೂ ಅಧಿಕ ರೈತರು ಬೆಳೆ ವಿಮೆ ನೋಂದಣಿ ಮಾಡಿಕೊಂಡಿದ್ದಾರೆ. ಮಧ್ಯಂತರ ಪರಿಹಾರದ ಮೊದಲ ಕಂತಿನ ಹಣ ಕೆಲವು ರೈತರ ಖಾತೆಗಳಿಗೆ ಜಮೆಯಾಗಿದ್ದರೂ, ಎರಡನೇ ಕಂತಿನ ವಿಮೆ ಹಣ ಇದುವರೆಗೆ ಜಮೆಯಾಗಿಲ್ಲ ಎಂದು ಪ್ರತಿಭಟನಾಕಾರರು ದೂರಿದರು. ಕೃಷಿ ಅಧಿಕಾರಿಗಳನ್ನು ಸಂಪರ್ಕಿಸಿದಾಗ ಸಮರ್ಪಕ ಮಾಹಿತಿ ನೀಡದೆ, ವಿಮೆ ಹಣವನ್ನು ರೈತರ ಖಾತೆಗಳಿಗೆ ವರ್ಗಾಯಿಸಲಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಖಜೂರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರೈತರ ಖಾತೆಗಳಿಗೆ ಹಣ ಬಂದಿಲ್ಲ. ಬೆಳೆ ಕಟಾವು ಸಮೀಕ್ಷೆಯ ಅರ್ಹತೆ ಇಲ್ಲ ಎಂಬ ಕಾರಣ ನೀಡಲಾಗುತ್ತಿದ್ದು, ಈ ಕುರಿತು ಅಧಿಕಾರಿಗಳು ಸ್ಪಷ್ಟನೆ ನೀಡ ಬೇಕು ಎಂದು ಆಗ್ರಹಿಸಿದರು.

ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ಸಮರ್ಪಕ ಮಳೆಯಾಗದೆ ರೈತರು ಹಾಗೂ ಕೃಷಿ ಕಾರ್ಮಿಕರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಜಾನುವಾರುಗಳಿಗೆ ಮೇವು ಹಾಗೂ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಸಾಧ್ಯತೆ ಇರುವುದರಿಂದ ಆಳಂದ ತಾಲೂಕನ್ನು ಕೂಡಲೇ ಬರಪೀಡಿತ ಪ್ರದೇಶವೆಂದು ಘೋಷಿಸಬೇಕು ಎಂದು ಒತ್ತಾಯಿಸಿದರು.

ಪ್ರತಿ ಎಕರೆಗೆ 50 ಸಾವಿರ ರೂ. ಬರ ಪರಿಹಾರ ನೀಡಬೇಕು, ಬೆಳೆ ವಿಮೆಯ ಎರಡನೇ ಕಂತಿನ ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕು, ರೈತರ ಸಾಲಮನ್ನಾ ಮಾಡಬೇಕು, ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಗೋಶಾಲೆ ಆರಂಭಿಸಬೇಕು ಹಾಗೂ ಉದ್ಯೋಗ ಖಾತ್ರಿ ಯೋಜನೆಯ ಕಾಮಗಾರಿಗಳನ್ನು ತಕ್ಷಣ ಆರಂಭಿಸಿ ಗ್ರಾಮೀಣ ಜನರಿಗೆ ಉದ್ಯೋಗ ಕಲ್ಪಿಸಬೇಕು ಎಂದು ರೈತರು ಮನವಿ ಮಾಡಿದರು.

ಪ್ರತಿಭಟನೆಯಲ್ಲಿ ಚಿತಾನಂದ ಧೋಳೆ, ರೇವಣಸಿದ್ದಪ್ಪ ಚಂಗಳೆ, ಬಸವರಾಜ ಅಲ್ದಿ, ಕುಮಾರ ಬಂಡೆ, ಗುರುಬಸಪ್ಪ ಢಗೆ, ಅರವಿಂದ ಅಲ್ದೆ, ನಾಗೇಶ ನಗರೆ, ಸಂಗನಬಸಪ್ಪ ವಾನೆಗಾಂವ, ಕರಬಸಪ್ಪ ವಾಡೆ, ಸಿದ್ದರಾಮ ಘಂಟೆ, ಗಾಂಧಿ ಹಳ್ಳಿ, ಮಹಾದೇವ ವಾಡೆ, ಶಿವಪ್ಪ ಘಂಟೆ ಸೇರಿದಂತೆ ಹಲವರು ಭಾಗವಹಿಸಿದ್ದರು.



ಆ.17 ರ ವರೆಗೆ ಬಳ್ಳಾರಿ ಜಿಲ್ಲೆಯಾದ್ಯಂತ ಹರ್ ಘರ್ ತಿರಂಗಾ' ಅಭಿಯಾನ

ಬಳ್ಳಾರಿ,ಆ.15-

ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಆಗಸ್ಟ್ 17 ರವರೆಗೆ ಜಿಲ್ಲೆಯಾದ್ಯಂತ ಹರ್ ಘರ್ ತಿರಂಗಾ' ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ತಿಳಿಸಿದ್ದಾರೆ.

ಆಜಾದಿ ಕಾ ಅಮೃತ ಮಹೋತ್ಸವದ ಭಾಗವಾಗಿ ಕೇಂದ್ರ ಸರ್ಕಾರವು ಆರಂಭಿಸಿರುವ ಈ ಅಭಿಯಾನವು ಪ್ರತಿಯೊಬ್ಬ ನಾಗರಿಕರು ತಮ್ಮ ಮನೆಗಳಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವ ಮೂಲಕ ತ್ರಿವರ್ಣ ಧ್ವಜದೊಂದಿಗೆ ವೈಯಕ್ತಿಕ ಹಾಗೂ ಭಾವನಾತ್ಮಕ ಬಂಧವನ್ನು ಬೆಳೆಸಿಕೊಳ್ಳುವುದು ಈ ಅಭಿಯಾನದ ಮುಖ್ಯ ಉದ್ದೇಶವಾಗಿದೆ.

ಅಭಿಯಾನದಲ್ಲಿ ತಿರಂಗಾ ರ್ಯಾಲಿ, ಸೈಕಲ್ ಜಾಥಾ ಮತ್ತು ಬೈಕ್ ಜಾಥಾಗಳನ್ನು ಆಯೋಜಿಸುವುದು. ರಾಷ್ಟಗೀತೆಗೆ ಸಂಬಧಿಸಿದತೆ ಜನಪ್ರತಿನಿಧಿಗಳು, ಗಣ್ಯರು ಹಾಗೂ ಸಾರ್ವಜನಿಕರ ಭಾಗವಹಿಸುವಿಕೆಯೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುವುದು. ಅಂಗಡಿಗಳು, ಮಾಲ್ ಗಳು, ವಿಮಾನ ನಿಲ್ದಾಣ, ರೈಲು ನಿಲ್ದಾಣ, ಬಸ್ ನಿಲ್ದಾಣ ಮತ್ತು ಪ್ರಮುಖ ಸ್ಥಳಗಳಲ್ಲಿ ತ್ರಿವರ್ಣ ಧ್ವಜ ಪ್ರದರ್ಶನ ಹಾಗೂ ಧ್ವಜಾರೋಹಣ ಏರ್ಪಡಿಸುವುದು. ಎಲ್ಲಾ ಸರ್ಕಾರಿ ಕಚೇರಿಗಳು, ಅಣೆಕಟ್ಟು, ಸೇತುವೆಗಳು, ಆಸ್ಪತ್ರೆಗಳು, ಶಾಲೆ-ಕಾಲೇಜುಗಳು ಮತ್ತು ಸಾರ್ವಜನಿಕ ಸ್ಥಳಗಳಿಗೆ ದೀಪಾಲಂಕಾರ ಮಾಡುವುದು. ಸಾರ್ವಜನಿಕ ವೃತ್ತಗಳಲ್ಲಿ ತ್ರಿವರ್ಣ ಧ್ವಜ ಆಧಾರಿತ ರಂಗೋಲಿ ಬಿಡಿಸುವುದು ಹಾಗೂ ಶಾಲೆ-ಕಾಲೇಜುಗಳಲ್ಲಿ ರಾಷ್ಟಗೀತೆ, ಪ್ರಬಂಧ, ರಸಪ್ರಶ್ನೆ ಮತ್ತು ಚಿತ್ರಕಲಾ ಸ್ಪರ್ಧೆಗಳನ್ನು ಆಯೋಜಿಸಬೇಕು.

ಸರ್ಕಾರಿ ಅಧಿಕಾರಿಗಳು, ನೌಕರರು ಹಾಗೂ ಸಾರ್ವಜನಿಕರು ಅಭಿಯಾನದ ಚಿತ್ರಗಳು ಹಾಗೂ ಸ್ವಯಂ ಚಿತ್ರಗಳನ್ನು ಹರ್ ಘರ್ ತಿರಂಗಾ' ಪೋರ್ಟಲ್(https://www.harghartiranga.com)ನಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ತಿಳಿಸಿದ್ದಾರೆ.

ಸಿ.ಹೆಚ್. ಪೌಡರ್ ಮಿಶ್ರಿತ ಹೆಂಡ ಮಾರಾಟಕ್ಕೆ ಕಡಿವಾಣಕ್ಕೆ ಕರವೇಯಿಂದ ಸಚಿವರಿಗೆ ಮನವಿ

ಎಂ. ಒತ್ತಾಯಿಸಿದರು.

ಈ ಕುರಿತು ಜಿಲ್ಲಾ ಉಸ್ತುವಾರಿ ಸಚಿವ ಡಾ. ಅಜಯ್ ಧರ್ಮಸಿಂಗ್ ಅವರಿಗೆ ಮನವಿ ಸಲ್ಲಿಸಿದ ಅವರು, ಕಳೆದ ಮೂರು ತಿಂಗಳಿಂದ ಸಂಬಂಧಿಸಿದ ಅಧಿಕಾರಿಗಳಿಗೆ ನಿರಂತರವಾಗಿ ದೂರು ನೀಡಿದರೂ ಅಕ್ರಮ ಮದ್ಯ ಮಾರಾಟಕ್ಕೆ ಕಡಿವಾಣ ಬಿದ್ದಿಲ್ಲ ಎಂದು ಆರೋ ಪಿಸಿದರು.

ಜಿಲ್ಲೆಯ ಗ್ರಾಮಗಳು, ತಾಂಡಾ ಗಳು, ಕ್ಯಾಂಪ್‌ಗಳು, ವಾರ್ಡ್‌ಗಳು ಹಾಗೂ ಸ್ಲಂ ಪ್ರದೇಶಗಳಲ್ಲಿ ಅನಧಿಕೃತವಾಗಿ ಮದ್ಯ ಮಾರಾಟ ನಡೆಯುತ್ತಿದೆ. ಇದರಿಂದ ಯುವಕರು, ರೈತರು ಮತ್ತು ಕೂಲಿ ಕಾರ್ಮಿಕರು ಆರೋಗ್ಯ ಹಾಗೂ ಆರ್ಥಿಕ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಕುಟುಂಬಗಳ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಮಹಿಳೆಯರು ಸಂಕಷ್ಟ ಅನುಭವಿಸುವಂತಾಗಿದೆ ಎಂದು ಹೇಳಿದರು.

ಪರವಾನಗಿ ಪಡೆದ ಮದ್ಯದಂಗಡಿಗಳಲ್ಲೂ ನಿಗದಿತ ಪ್ರಮಾಣ, ಸಮಯ ಹಾಗೂ ಮದ್ಯ ಮಾರಾಟಸೇವನೆಗೆ ಸಂಬಂಧಿಸಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಕ್ರಮ ಕೈಗೊಳ್ಳಬೇಕು. ಮದ್ಯದಂಗಡಿಗಳಿಂದ ಗ್ರಾಮಗಳಿಗೆ ವಾಹನ ಅಥವಾ ಸಿಬ್ಬಂದಿ ಮೂಲಕ ಮದ್ಯ ಪೂರೈಕೆ ಮಾಡುವುದನ್ನು ತಡೆಯಬೇಕು ಎಂದು ಒತ್ತಾಯಿಸಿದರು.

ಅಕ್ರಮ ಮದ್ಯ ಮಾರಾಟದ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿ, ನಿಯಮ ಉಲ್ಲಂಘಿಸುವ ಸನ್ನದುದಾರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಜಿಲ್ಲಾಡಳಿತ ಹಾಗೂ ಅಬಕಾರಿ ಇಲಾಖೆಗೆ ಸೂಚಿಸಬೇಕು ಎಂದು ವಿನೋದರೆಡ್ಡಿ ಮನವಿ ಮಾಡಿದರು.

ಮಾನವಿ ಘಟಕದ ಅಧ್ಯಕ್ಷ ಡಿ ಬಸನಗೌಡ, ಸಿಂಧನೂರು ಅಧ್ಯಕ್ಷ ಎಲ್,ರಾಜಸಾಬ್, ಮಸ್ಕಿ ಅಧ್ಯಕ್ಷ ನಂದಪ್ಪ ರೆಡ್ಡಿ, ತಮ್ಮಣ್ಣ ಹೆರುಂಡಿ, ಅಂಬರೀಶ್ ಪಾಟೀಲ್, ಗುರುನಾಥ ರೆಡ್ಡಿ ಇದ್ದರು.

ಮ್ಯಾಜಿಸ್ಟ್ರೇಟ್ ತನಿಖೆ ಬಳಿಕ ಚಾಮರಾಜನಗರ ಅರಣ್ಯ ಎನ್‌ಕೌಂಟರ್ ವಾಸ್ತವಾಂಶ ತಿಳಿಯಲಿದೆ: ಸಿಎಂ ಡಿಕೆಶಿ

ಬೆಂಗಳೂರು: ಚಾಮರಾಜನಗರ ಅರಣ್ಯದಲ್ಲಿ ಎನ್‌ಕೌಂಟರ್ ಸಂಬಂಧ ಮ್ಯಾಜಿಸ್ಟ್ರೇಟ್ ತನಿಖೆ ಬಳಿಕ ವಾಸ್ತವಾಂಶ ತಿಳಿಯಲಿದೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ಹೇಳಿ ದ್ದಾರೆ.

ಬೆಂಗಳೂರಲ್ಲಿ ಮಾತನಾಡಿದ ಅವರು, ಚಾಮರಾಜನಗರ ಅರಣ್ಯ ದಲ್ಲಿ ಎನ್‌ಕೌಂಟರ್ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ನನಗೆ ಬೆಳ್ಳಗ್ಗೆ ಐದು ಗಂಟೆಗೆ ಮಾಹಿತಿ ತಲುಪಿದೆ. ಮ್ಯಾಜಿಸ್ಟ್ರೇಟ್ ನೇತೃತ್ವದಲ್ಲಿ ತನಿಖೆಗೆ ಆದೇಶ ಮಾಡಿದ್ದೇವೆ. ತನಿಖೆಯ ವೇಳೆ ವಾಸ್ತವಾಂಶ ತಿಳಿಯುತ್ತದೆ ಎಂದರು.

ಮಾಧ್ಯಮದಲ್ಲಿ ಕೆಲ ವಿಚಾರಗಳನ್ನು ತೋರಿಸ್ತಾ ಇದ್ದಾರೆ. ಅರಣ್ಯ ಪ್ರದೇಶದಲ್ಲಿ ಈ ಘಟನೆ ನಡೆದಿದೆ. ಕೆಲವು ವಸ್ತು ಹಾಗೂ ಬಂದೂಕುಗಳನ್ನ ಸೀಜ್ ಮಾಡಲಾ ಗಿದೆ. ಒಬ್ಬರನ್ನು ಸಾಗಣೆ ಮಾಡುವ ವೇಳೆ ಸಾವಾಗಿದೆ. ಉಳಿದವರನ್ನು ವಶಕ್ಕೆ ಪಡೆಯಲಾಗಿದೆ. ಪರಿಶೀಲನೆ ಸಹ ನಡೆಯುತ್ತಿದೆ. ಮ್ಯಾಜಿಸ್ಟ್ರೇಟ್ ತನಿಖೆ ಬಳಿಕ ಎಲ್ಲ ಮಾಹಿತಿ ತಿಳಿಯಲಿದೆ ಎಂದು ಹೇಳಿದರು.

ನಿಮ್ಮೂರು ಸುದ್ದಿ

ಸಂಪಾದಕೀಯ

ಅಖಂಡ ಭಾರತದೊಳಗೊಂದು ‘ಖಂಡ ಭಾರತ’!

ಡಿಜಿಟಲ್ ಕ್ರಾಂತಿ, ಚಂದ್ರಯಾನದ ದಿಗ್ವಿಜಯ, ವಿಶ್ವದ ಅತಿ ದೊಡ್ಡ ಆರ್ಥಿಕತೆ ಎಂದು ಹೇಳಿಕೊಂಡು ಜಾಗತಿಕ ವೇದಿಕೆಯಲ್ಲಿ ಭಾರತ ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುತ್ತಿದೆ. ಆದರೆ, ಸ್ವಾತಂತ್ರ್ಯದ 79 ವರ್ಷಗಳನ್ನು ಪೂರೈಸಿ 80ನೇ ವಸಂತಕ್ಕೆ ಕಾಲಿಟ್ಟಿರುವ ಈ ದೇಶದ ಅಸಲಿಯತ್ತನ್ನು ನೋಡಿದರೆ, ಅದು ಒಂದೇ ರಾಷ್ಟ್ರದೊಳಗೆ ಸಂಪೂರ್ಣವಾಗಿ ಒಡೆದುಹೋದ ಎರಡು ಭಿನ್ನ ಲೋಕಗಳಲ್ಲಿ ನಾವು ಬದುಕುತ್ತಿದ್ದೇವೆ ಎಂಬ ಕಟುಸತ್ಯದ ಎದುರಿಗೆ ನಮ್ಮನ್ನು ನಿಲ್ಲಿಸುತ್ತದೆ. ಮೇಲ್ನೋಟಕ್ಕೆ ಕಾಣುವ ಅಖಂಡ ಭಾರತದ ಪ್ರಗತಿಯ ರಾರಾಜಿಸುವ ಬೆಳಕಿನ ಅಂತರಾಳದಲ್ಲಿ, ಹಸಿವು, ನಿರುದ್ಯೋಗ, ಹತ್ತಿಕ್ಕಲ್ಪಟ್ಟ ಧ್ವನಿಗಳೊಂದಿಗೆ ಕತ್ತಲು ಕವಿದು ರೋದಿಸುತ್ತಿರುವ 'ಖಂಡ ಭಾರತ'ವೊಂದಿದೆ!

ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೂ ಸಮಾನತೆ, ಘನತೆ ಮತ್ತು ಮುಕ್ತವಾಗಿ ಧ್ವನಿ ಎತ್ತುವ ಹಕ್ಕನ್ನು ಕೊಡುಗೆಯಾಗಿ ನೀಡಿದೆ. ಆದರೆ ವರ್ತಮಾನದ ಭಾರತದಲ್ಲಿ ಸರ್ಕಾರದ ನೀತಿಗಳನ್ನು, ಆಡಳಿತಾತ್ಮಕ ವೈಫಲ್ಯಗಳನ್ನು ಅಥವಾ ಸಮಾಜದ ಬಿರುಕುಗಳನ್ನು ಪ್ರಶ್ನಿಸುವವರನ್ನು ದೇಶದ್ರೋಹಿಗಳು ಎಂದು ಬಿಂಬಿಸಿ ಬಾಯಿಮುಚ್ಚಿಸುವ ದಬ್ಬಾಳಿಕೆ ವ್ಯವಸ್ಥಿತವಾಗಿ ನಡೆಯುತ್ತಿದೆ. ಮಹಾತ್ಮ ಗಾಂಧಿಯವರು, ''ಸ್ವಾತಂತ್ರ್ಯದ ನಿಜವಾದ ಅರ್ಥವೆಂದರೆ ಭಯವಿಲ್ಲದೆ ಬದುಕುವುದು ಮತ್ತು ಸರ್ಕಾರದ ತಪ್ಪುಗಳನ್ನು ನಿರ್ಭಯವಾಗಿ ಪ್ರಶ್ನಿಸುವುದು'' ಎಂದಿದ್ದರು. ಇಂದು ಗಾಂಧಿಯವರ ಈ ಪವಿತ್ರ ವ್ಯಾಖ್ಯಾನಕ್ಕೆ ವ್ಯವಸ್ಥಿತವಾಗಿ ತಿಲಾಂಜಲಿ ಇಡಲಾಗುತ್ತಿದೆ. ಬಾಬಾ ಸಾಹೇಬರು ಅಂದೇ ಎಚ್ಚರಿಸುತ್ತಾ, ''ನಾವು ರಾಜಕೀಯ ಸಮಾನತೆಯನ್ನು ಪಡೆದಿದ್ದರೂ, ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ಹಾಗೇ ಮುಂದುವರಿದರೆ ಈ ಪ್ರಜಾಪ್ರಭುತ್ವ ಧ್ವಂಸವಾಗುತ್ತದೆ'' ಎಂದು ನುಡಿದಿದ್ದರು.

ಹೌದು, ಅಂಬೇಡ್ಕರ್ ಅವರ ಅಂದಿನ ಆ ಎಚ್ಚರಿಕೆ ಇಂದಿಗೆ ಅಕ್ಷರಶಃ ಸತ್ಯವಾಗುತ್ತಿದೆ. ಮುಕ್ತತೆಯ ಮುಖವಾಡದ ಹಿಂದೆ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯ ಭೀಕರ ಕಂದಕವೊಂದು ದೇಶವನ್ನು ಇನ್ನಿಲ್ಲದಂತೆ ಆವರಿಸಿಕೊಂಡಿದೆ. ಇಂದು ದೇಶದ ಸಂಪತ್ತು ಕೆಲವೇ ಕೆಲವು ಕಾರ್ಪೊರೇಟ್ ಕುಳಗಳ ಕಪಿಮುಷ್ಟಿ ಸೇರಿದೆ. ಅಧಿಕೃತ ವರದಿಗಳ ಪ್ರಕಾರ, ದೇಶದ ಒಟ್ಟು ಸಂಪತ್ತಿನ ಶೇ. 40 ಕ್ಕಿಂತ ಹೆಚ್ಚಿನ ಪಾಲು ಕೇವಲ ಶೇ. 1ರಷ್ಟು ಶ್ರೀಮಂತರ ಪಾಲಾಗಿದೆ. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಮತ್ತು ಇನ್‌ಸ್ಟಿಟ್ಯೂಟ್ ಫಾರ್ ಹ್ಯೂಮನ್ ಡೆವಲಪ್‌ಮೆಂಟ್ ಜಂಟಿಯಾಗಿ ಬಿಡುಗಡೆ ಮಾಡಿರುವ ಭಾರತ ಉದ್ಯೋಗ ವರದಿಗಳ ಪ್ರಕಾರ, ದೇಶದ ಒಟ್ಟು ನಿರುದ್ಯೋಗಿಗಳಲ್ಲಿ ಶೇ. 83 ರಷ್ಟು ಮಂದಿ ಯುವಜನರೇ ಇದ್ದು, ಪದವೀಧರರ ಯುವ ನಿರುದ್ಯೋಗ ದರವು ಆತಂಕಕಾರಿಯಾಗಿ ಮುಂದುವರಿಯುತ್ತಲೇ ಇದೆ. ಒಂದು ಬದಿಯಲ್ಲಿ ಡಿಜಿಟಲ್ ಇಂಡಿಯಾ ಘೋಷಣೆ ಮೊಳಗುತ್ತಿದ್ದರೆ, ಇನ್ನೊಂದು ಬದಿಯಲ್ಲಿ ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ( ) ಭಾರತವು 100ರ ಗಡಿ ದಾಟಿದೆ. 123 ದೇಶಗಳ ಪೈಕಿ 102ನೇ ಸ್ಥಾನದಲ್ಲಿದ್ದು, 25.8 ಅಂಕಗಳೊಂದಿಗೆ ದೇಶ ಗಂಭೀರ ಹಸಿವಿನ ವರ್ಗದಲ್ಲಿದೆ. ಬಿಹಾರ, ಜಾರ್ಖಂಡ್, ಮಧ್ಯಪ್ರದೇಶ, ಉತ್ತರ ಪ್ರದೇಶ, ಮೇಘಾಲಯ ರಾಜ್ಯಗಳಲ್ಲಿ ಲಕ್ಷಾಂತರ ಮಕ್ಕಳು ಇಂದಿಗೂ ಪೌಷ್ಟಿಕತೆಯ ಕೊರತೆ ಹಾಗೂ ಹಸಿವಿನಿಂದ ಬಳಲುತ್ತಿದ್ದಾರೆ. ನಿತ್ಯ ಸಾವಿನ ಹಾದಿ ಹಿಡಿಯುತ್ತಿದ್ದಾರೆ.

ಅದೇ ರೀತಿ, ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿರುವ ಪತ್ರಿಕಾ ಸ್ವಾತಂತ್ರ್ಯವಂತೂ ಇಂದು ಅಕ್ಷರಶಃ ಉಸಿರುಗಟ್ಟಿ ಪ್ರಾಣ ಬಿಡುವ ಹಂತ ತಲುಪಿದೆ! ಜಾಗತಿಕ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ( ) ಭಾರತದ ಸ್ಥಾನ ನತದೃಷ್ಟವೆಂಬಂತೆ ಪಾತಾಳಕ್ಕೆ ಕುಸಿದಿದ್ದರೂ ಆಡಳಿತಗಾರರಿಗೆ ಕಿಂಚಿತ್ತೂ ನಾಚಿಕೆಯಿಲ್ಲ. ನಿರ್ಭೀತವಾಗಿ ಸತ್ಯದ ಮುಖವಾಡ ಕಳಚಿ ಸತ್ಯವನ್ನು ಬರೆಯಬೇಕಾದ ಪ್ರಮುಖ ಮಾಧ್ಯಮಗಳು ಇಂದು ಅಧಿಕಾರದ ಚೆತ್ತಕ್ಕೆ ಹೆದರಿ, ಮಣಿದು, ಬಾಲ ಮುದುರಿಕೊಂಡು ಆಡಳಿತ ನಡೆಸುವವರ ಮಡಿಲು ಸೇರಿವೆ. ನಿತ್ಯ ಸರ್ಕಾರದ ಭಜನಾ ಮಂಟಪಗಳಾಗಿ ಮಾರ್ಪಟ್ಟಿರುವುದು ನಮ್ಮ ಕಣ್ಣಮುಂದಿರುವ ಅತ್ಯಂತ ನಾಚಿಕೆಗೇಡಿನ ಸಂಗತಿ. ಅಧಿಕಾರದ ದರ್ಪವನ್ನು, ಆಡಳಿತದ ಹಸಿ ಹಸಿ ಲೋಪದೋಷಗಳನ್ನು ದಿಟ್ಟತನದಿಂದ ಬೊಟ್ಟುಮಾಡಿ ತೋರಿಸಬೇಕಾದ ಪತ್ರಕರ್ತರು ಮತ್ತು ಸ್ವತಂತ್ರ ಧ್ವನಿಗಳ ಬಾಯಿಗೆ ಬೀಗ ಹಾಕಲು ಇಂದು ಅಕ್ಷರಶಃ ಕಾನೂನಿನ ಕುಣಿಕೆಗಳನ್ನು ಬಿಗಿಯಲಾಗುತ್ತಿದೆ. ಸತ್ಯವನ್ನು ಬರೆಯುವುದೇ ಅರಾಜಕತೆ ಅಥವಾ ದೇಶದ್ರೋಹ ಎಂಬಂತೆ ಬಿಂಬಿಸುತ್ತಿರುವ ಈ ದಬ್ಬಾಳಿಕೆಯು ಪ್ರಜಾಪ್ರಭುತ್ವದ ಕಂಠವನ್ನು ಹಿಸುಕಿ ಸಾಯಿಸುತ್ತಿದೆ.

ದುಬಾರಿ ಖಾಸಗಿ ಶಾಲೆಗಳ ದೊಡ್ಡ ದೊಡ್ಡ ಜಾಹೀರಾತುಗಳ ಪಕ್ಕದಲ್ಲೇ, ಕನಿಷ್ಠ ಸೂರು, ಕುಡಿಯುವ ನೀರು, ಶೌಚಾಲಯವೂ ಇಲ್ಲದೆ, ಗೋಡೆಗಳು ಬಿರುಕುಬಿಟ್ಟು ಬೀಳುವ ಹಂತದಲ್ಲಿರುವ ಸರ್ಕಾರಿ ಶಾಲೆಗಳು ಬಡ ಕೂಲಿ ಕಾರ್ಮಿಕರ ಮಕ್ಕಳ ಭವಿಷ್ಯವನ್ನು ಅಕ್ಷರಶಃ ಅತಂತ್ರಗೊಳಿಸುತ್ತಿವೆ. ಶ್ರೀಮಂತರ ಮಕ್ಕಳು ಹೈಟೆಕ್ ಅಂಗಳದಲ್ಲಿ ಓದುತ್ತಿದ್ದರೆ, ಬಡವನ ಮಗು ಮಾತ್ರ ಶಿಥಿಲಗೊಂಡ ಶಾಲೆಯ ಕೆಳಗೆ ಸಾವಿನ ಭಯದಲ್ಲೇ ಅಕ್ಷರ ಕಲಿಯುವಂತೆ ಮಾಡುತ್ತಿರುವ ಈ ವ್ಯವಸ್ಥೆಯ ಕ್ರೌರ್ಯಕ್ಕೆ ಏನು ಹೇಳಬೇಕು? ಇನ್ನು, ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ () ವರದಿಗಳು ಬಿಚ್ಚಿಡುತ್ತಿರುವ ಕರಾಳ ಸತ್ಯಗಳಂತೂ ಬೆಚ್ಚಿಬೀಳಿಸುವಂತಿವೆ. ವರ್ಷಕ್ಕೆ ಬರೋಬ್ಬರಿ 4.4 ಲಕ್ಷಕ್ಕೂ ಅಧಿಕ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಮತ್ತು ಅಂಚಿನಲ್ಲಿರುವ ದಲಿತ-ಶೋಷಿತರ ಮೇಲಿನ ದಬ್ಬಾಳಿಕೆಗಳು ದಿನದಿಂದ ದಿನಕ್ಕೆ ವಿರಾಮವಿಲ್ಲದೆ ಹೆಮ್ಮರವಾಗಿ ಬೆಳೆಯುತ್ತಿವೆ. ಜೊತೆಗೆ, ಚುನಾವಣೆಗಳಲ್ಲಿ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಸಮಾಜದಲ್ಲಿ ವ್ಯವಸ್ಥಿತವಾಗಿ ಬಿತ್ತಲಾಗುತ್ತಿರುವ ಧರ್ಮದ ಅಮಲು ಮತ್ತು ವಿಷಪೂರಿತ ಮತೀಯ ದ್ವೇಷವು, ಶತಮಾನಗಳ ಕಾಲ ಈ ದೇಶದ ಅತಿ ದೊಡ್ಡ ಹೆಮ್ಮೆಯಾಗಿದ್ದ ಗಂಗಾ-ಜಮುನಿ ತಹಜೀಬ್ ಅಂದರೆ ಗಂಗೆಯಂತೆ ಹರಿದುಬಂದ ಗಟ್ಟಿಯಾದ ಸಾಮರಸ್ಯ ಮತ್ತು ಸಹಬಾಳ್ವೆಯನ್ನು ಇಂದು ಬುಡಸಮೇತ ಧ್ವಂಸ ಮಾಡುತ್ತಿದೆ!

''ಕೇವಲ ವಿದೇಶಿ ಆಡಳಿತಗಾರರನ್ನು ಬದಲಾಯಿಸುವುದರಿಂದ ಸ್ವಾತಂತ್ರ್ಯ ಸಿಗುವುದಿಲ್ಲ; ಮನುಷ್ಯನಿಂದ ಮನುಷ್ಯನ ಶೋಷಣೆ ಮತ್ತು ಅಮಾನವೀಯತೆ ಸಂಪೂರ್ಣವಾಗಿ ಕೊನೆಗೊಂಡಾಗ ಮಾತ್ರ ಪ್ರಜೆಗಳು ನಿಜವಾದ ಸ್ವಾತಂತ್ರ್ಯವನ್ನು ಅನುಭವಿಸಲು ಸಾಧ್ಯ'' ಎಂದಿದ್ದರು ಭಗತ್ ಸಿಂಗ್. ''ನಾವು ರಾಜಕೀಯ ಪ್ರಜಾಪ್ರಭುತ್ವವನ್ನು (ಒಂದು ವ್ಯಕ್ತಿ, ಒಂದು ಮತ, ಒಂದು ಮೌಲ್ಯ) ಪಡೆದಿದ್ದೇವೆ. ಆದರೆ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಯನ್ನು ಹಾಗೇ ಮುಂದುವರಿಸಿಕೊಂಡು ಹೋದರೆ, ಅಸಮಾಧಾನಿತರು ನಮ್ಮ ಈ ರಾಜಕೀಯ ಪ್ರಜಾಪ್ರಭುತ್ವದ ಕಟ್ಟಡವನ್ನೇ ಧ್ವಂಸಗೊಳಿಸುತ್ತಾರೆ'' ಎಂದು ಎಚ್ಚರಿಸುವ ಮೂಲಕ, ಆರ್ಥಿಕ ಹಾಗೂ ಸಾಮಾಜಿಕ ಮುಕ್ತತೆಯಿಲ್ಲದೆ ನಿಜವಾದ ಸ್ವಾತಂತ್ರ್ಯ ಅಸಾಧ್ಯ ಎಂದಿದ್ದರು ಅಂಬೇಡ್ಕರ್. ಭಾರತದ ಸ್ವಾತಂತ್ರ್ಯ ಹೋರಾಟದ ಜೊತೆಗೆ ವಿಶ್ವ ಮಟ್ಟದಲ್ಲಿ ಸ್ವಾತಂತ್ರ್ಯವನ್ನು ವ್ಯಾಖ್ಯಾನಿಸಿದ ಮಂಡೇಲಾ ಅವರು, ''ಸ್ವಾತಂತ್ರ್ಯ ಎನ್ನುವುದು ಕೇವಲ ತನ್ನದೇ ಸರಪಳಿಗಳನ್ನು ಕಳಚಿಕೊಳ್ಳುವುದಲ್ಲ, ಬದಲಿಗೆ ಇತರರ ಸ್ವಾತಂತ್ರ್ಯವನ್ನು ಗೌರವಿಸುವ ಮತ್ತು ಬೆಂಬಲಿಸುವ ರೀತಿಯಲ್ಲಿ ಬದುಕುವುದು'' ಎಂದು ಹೇಳಿದ್ದರು. ಯಾವ ದೇಶದಲ್ಲಿ ಮನಸ್ಸು ಭಯರಹಿತವಾಗಿರುತ್ತದೋ ಮತ್ತು ತಲೆಯೆತ್ತಿ ನಿಲ್ಲಲು ಸ್ವಾತಂತ್ರ್ಯವಿರುತ್ತದೋ, ಯಾವ ದೇಶದಲ್ಲಿ ಜ್ಞಾನವು ಮುಕ್ತವಾಗಿರುತ್ತದೋ ಅಂತಹ ಸ್ವಾತಂತ್ರ್ಯದ ಸ್ವರ್ಗಕ್ಕೆ ನನ್ನ ದೇಶವು ಎಚ್ಚೆತ್ತುಕೊಳ್ಳಲಿ'' ಎಂದು ಆಶಿಸಿದ್ದರು ರವೀಂದ್ರನಾಥ್ ಟ್ಯಾಗೋರ್. ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಮಟ್ಟದಲ್ಲಿ ಗುಲಾಮಗಿರಿಯಿಂದ ಹೊರಬರುವುದೇ ನಿಜವಾದ ಸ್ವಾತಂತ್ರ್ಯ ಎಂದು ಸಾರಿದ್ದರು ಸ್ವಾಮಿ ವಿವೇಕಾನಂದ.

ಇವರೆಲ್ಲರ ಆಶಯದ ಸ್ವಾತಂತ್ರ್ಯದ ಭಾರತ ಇಂದು ನಿಜಕ್ಕೂ ನಮ್ಮ ಕಣ್ಣಮುಂದಿದೆಯೇ? ನಾವು ಅದೇ ಭಾರತದಲ್ಲಿ ಜೀವಿಸುತ್ತಿದ್ದೇವೆಯೇ ಎಂದರೆ, ಖಂಡಿತ ಇಲ್ಲ. ಒಂದೇ ದೇಶ, ಒಂದೇ ಸಂವಿಧಾನ, ಒಂದೇ ತ್ರಿವರ್ಣ ಧ್ವಜ. ಆದರೆ ಬದುಕು ಮಾತ್ರ ಎರಡು ವಿಭಿನ್ನ ಭಾರತಗಳದ್ದು.

ಒಂದು ಭಾರತ ಚಂದ್ರನ ಅಂಗಳಕ್ಕೆ ಹೆಜ್ಜೆ ಇಡುತ್ತಿದೆ. ಮತ್ತೊಂದು ಭಾರತದಲ್ಲಿ ಮಗು ಶಾಲೆಯ ಅಂಗಳ ತಲುಪುವುದಕ್ಕೂ ನದಿ, ಹಳ್ಳ, ಕೆಸರು, ಕುಸಿದ ಸೇತುವೆಗಳನ್ನು ದಾಟಬೇಕಾಗಿದೆ. ಒಂದು ಭಾರತ ಕೃತಕ ಬುದ್ಧಿಮತ್ತೆಯ ಮೂಲಕ ಜಗತ್ತಿನ ಭವಿಷ್ಯವನ್ನು ರೂಪಿಸುವ ಕನಸು ಕಾಣುತ್ತಿದೆ. ಮತ್ತೊಂದು ಭಾರತದಲ್ಲಿ ಸರ್ಕಾರಿ ಶಾಲೆಯ ಮೇಲ್ಛಾವಣಿ ಯಾವಾಗ ಕುಸಿಯುತ್ತದೋ ಎಂಬ ಭಯದಲ್ಲೇ ಮಕ್ಕಳು ಪಾಠ ಕೇಳಬೇಕಾಗಿದೆ. ಒಂದು ಭಾರತ ಬುಲೆಟ್ ರೈಲಿನ ವೇಗವನ್ನು ಅಳೆಯುತ್ತಿದೆ. ಮತ್ತೊಂದು ಭಾರತದಲ್ಲಿ ಬಡ ಕುಟುಂಬದ ಮಗು ಶಾಲೆಗೆ ಹೋಗಲು ಸರಿಯಾದ ರಸ್ತೆ, ಬಸ್ ಅಥವಾ ಸೇತುವೆಯ ನಿರೀಕ್ಷೆಯಲ್ಲಿದೆ. ಒಂದು ಭಾರತ ಡಿಜಿಟಲ್ ಇಂಡಿಯಾದಲ್ಲಿ ಬೆರಳ ತುದಿಯಿಂದ ವ್ಯವಹಾರ ನಡೆಸುತ್ತಿದೆ. ಇನ್ನೊಂದು ಭಾರತ ಎರಡು ಹೊತ್ತಿನ ಊಟಕ್ಕಾಗಿ ಬೆವರಿಳಿಸುತ್ತಿದೆ. ಒಂದು ಭಾರತ ಜಗತ್ತಿನ ಐದನೇ ಅತಿದೊಡ್ಡ ಆರ್ಥಿಕತೆಯೆಂಬ ಹಿರಿಮೆಯಿಂದ ಬೀಗುತ್ತಿದೆ. ಮತ್ತೊಂದು ಭಾರತದ ಯುವಕ ಕೈಯಲ್ಲಿ ಪದವಿ ಹಿಡಿದು ಕೆಲಸಕ್ಕಾಗಿ ಬೀದಿ ಬೀದಿ ಅಲೆಯುತ್ತಿದ್ದಾರೆ. ಒಂದು ಭಾರತದಲ್ಲಿ ಗಗನಚುಂಬಿ ಕಟ್ಟಡಗಳು, ಐಷಾರಾಮಿ ಆಸ್ಪತ್ರೆಗಳು, ಅಂತಾರಾಷ್ಟ್ರೀಯ ಗುಣಮಟ್ಟದ ಶಾಲೆಗಳು. ಮತ್ತೊಂದು ಭಾರತದಲ್ಲಿ ಸರ್ಕಾರಿ ಆಸ್ಪತ್ರೆಯ ಸರತಿ ಸಾಲು, ಬಾಗಿಲು, ಕೋಣೆ, ಕೊನೆಗೆ ಮಕ್ಕಳೂ ಇಲ್ಲದ ಸರ್ಕಾರಿ ಶಾಲೆ.

ಹೌದು, ಇದುವೇ ಇಂದಿನ ಅಖಂಡ ಭಾರತದೊಳಗೆ ಹೆಪ್ಪುಗಟ್ಟಿ ನಿಂತಿರುವ ಇನ್ನೊಂದು ಖಂಡ ಭಾರತ. ಭೌತಿಕವಾಗಿ ನಾವೆಲ್ಲರೂ ಒಂದೇ ಧ್ವಜದ ಕೆಳಗೆ ನಿಂತಿದ್ದರೂ, ಆರ್ಥಿಕ ಕಂದಕಗಳು, ಹಸಿವು, ನಿರುದ್ಯೋಗ, ದೌರ್ಜನ್ಯಗಳು ಮತ್ತು ಹತ್ತಿಕ್ಕಲ್ಪಟ್ಟ ಧ್ವನಿಗಳು ನಮ್ಮ ನಡುವಿನ ಅಂತರವನ್ನು ದಿನೇ ದಿನೇ ಹೆಚ್ಚಿಸುತ್ತಿವೆ. ಬುಲೆಟ್ ರೈಲುಗಳ ಓಟದ ವೇಗದಲ್ಲಿ ಬಡವರ ಕಣ್ಣೀರು ಮರೆತುಹೋಗಬಾರದು. ಡಿಜಿಟಲ್ ಪರದೆಗಳ ಹೊಳಪಿನ ಹಿಂದೆ ಹಸಿವಿನಿಂದ ಒಣಗಿದ ಮುಖಗಳು ಕಣ್ಣಿಗೆ ಕಾಣಿಸಬೇಕು. ಭಾಷಣಗಳ ಅಬ್ಬರದಿಂದ, ಕೇಕೆ-ಚಪ್ಪಾಳೆಗಳ ಆಚರಣೆಗಳಿಂದ ಸ್ವಾತಂತ್ರ್ಯದ ಪರಿಪೂರ್ಣತೆ ಸಿದ್ಧಿಸುವುದಿಲ್ಲ. ಮಾನವೀಯ ಮೌಲ್ಯಗಳು, ಸಾಮಾಜಿಕ ನ್ಯಾಯ, ಪತ್ರಿಕಾ ಸ್ವಾತಂತ್ರ್ಯ, ಸಮಾನ ಅವಕಾಶಗಳು ಒಂದೇ ತಕ್ಕಡಿಯಲ್ಲಿ ತೂಗಿದಾಗ ಮಾತ್ರ ಈ ದೇಶದ ಕಟ್ಟಕಡೆಯ ವ್ಯಕ್ತಿಗೂ ನಿಜವಾದ ಸ್ವಾತಂತ್ರ್ಯ ಸಿಗುತ್ತದೆ. ಆ ಮಹಾನ್ ನಾಯಕರ ಕನಸುಗಳು ನನಸಾಗುವ, ಪ್ರತಿಯೊಬ್ಬ ನಾಗರಿಕನೂ ಭಯವಿಲ್ಲದೆ, ತಲೆಯೆತ್ತಿ ಗೌರವದಿಂದ ಬದುಕುವ ಆ ಸುವರ್ಣ ದಿನವೇ ಭಾರತ ಮಾತೆಗೆ ಲಭಿಸುವ ಅಪ್ಪಟ ಮತ್ತು ನಿಜವಾದ ಸ್ವಾತಂತ್ರ್ಯ. ಆ ದಿನಕ್ಕಾಗಿ ಈ ದೇಶದ ಆತ್ಮಸಾಕ್ಷಿ ಎಚ್ಚೆತ್ತುಕೊಳ್ಳಲೇಬೇಕಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಅಂಬೇಡ್ಕರ್ ಪಾತ್ರ: ರಾಜಕೀಯ ಸ್ವಾತಂತ್ರ್ಯದಿಂದ ಸಾಮಾಜಿಕ ವಿಮೋಚನೆಯವರೆಗೆ...

ಅಂಬೇಡ್ಕರ್ ಅವರಿಗೆ 1947ರ ಆಗಸ್ಟ್ 15 ಅಂತಿಮ ಗುರಿಯಾಗಿರಲಿಲ್ಲ. ಅದು ಹೊಸ ಪ್ರಯಾಣದ ಆರಂಭವಾಗಿತ್ತು. ರಾಜಕೀಯ ಸ್ವಾತಂತ್ರ್ಯವನ್ನು ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವವಾಗಿ ಪರಿವರ್ತಿಸುವುದೇ ಅವರ ದೃಷ್ಟಿಯಲ್ಲಿ ಸ್ವಾತಂತ್ರ್ಯದ ಪೂರ್ಣತೆಯಾಗಿತ್ತು. ಆ ಕಾರಣಕ್ಕಾಗಿಯೇ ಅಂಬೇಡ್ಕರ್ ಅವರನ್ನು ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಕಾಂಗ್ರೆಸ್ ನಾಯಕರ ಮಾದರಿಯಂತೆ ಅಳೆಯುವುದಕ್ಕಿಂತ, ಭಾರತೀಯ ಸ್ವಾತಂತ್ರ್ಯದ ಅರ್ಥವನ್ನೇ ವಿಸ್ತರಿಸಿದ ನಾಯಕ ಎಂದು ನೋಡುವುದು ಹೆಚ್ಚು ಸಮರ್ಪಕ.

ಭಾರತದ ಸ್ವಾತಂತ್ರ್ಯ ಹೋರಾಟದ ಕುರಿತು ಮಾತನಾಡುವಾಗ ಸಾಮಾನ್ಯವಾಗಿ ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರು, ಸುಭಾಷ್ ಚಂದ್ರ ಬೋಸ್, ಭಗತ್ ಸಿಂಗ್, ಸರ್ದಾರ್ ಪಟೇಲ್, ಮೌಲಾನಾ ಅಬುಲ್ ಕಲಾಂ ಆಜ್ಹಾದ್, ಚಂದ್ರಶೇಖರ್ ಆಜ್ಹಾದ್ ಸೇರಿದಂತೆ ಬಹುತೇಕರ ಹೆಸರುಗಳು ಮುಂಚೂಣಿಗೆ ಬರುತ್ತವೆ. ಈ ಹೋರಾಟವನ್ನು ಬ್ರಿಟಿಷ್ ಆಳ್ವಿಕೆಯನ್ನು ಕೊನೆಗೊಳಿಸುವುದಕ್ಕಾಗಿ ನಡೆದ ಅಸಹಕಾರ, ಸತ್ಯಾಗ್ರಹ, ನಾಗರಿಕ ಅಸಹಕಾರ, ಕ್ವಿಟ್ ಇಂಡಿಯಾದಂತಹ ಹಲವಾರು ಚಳವಳಿಗಳ ದೃಷ್ಟಿಯಿಂದ ಮಾತ್ರ ನೋಡಿದರೆ ಡಾ. ಬಿ.ಆರ್. ಅಂಬೇಡ್ಕರ್ ಅವರ ಪಾತ್ರ ವಿಭಿನ್ನವಾಗಿ ಕಾಣಿಸುತ್ತದೆ. ಅವರು ಕಾಂಗ್ರೆಸ್ ನೇತೃತ್ವದ ಪ್ರಮುಖ ಬ್ರಿಟಿಷ್ ವಿರೋಧಿ ಜನಾಂದೋಲನಗಳ ನಾಯಕರಾಗಿರಲಿಲ್ಲ. ಕೆಲವು ಸಂದರ್ಭಗಳಲ್ಲಿ ಅವುಗಳ ಕಾರ್ಯತಂತ್ರವನ್ನೇ ಅಂಬೇಡ್ಕರ್ ಕಟುವಾಗಿ ಟೀಕಿಸಿದರು.

ಆದರೆ, ಸ್ವಾತಂತ್ರ್ಯವೆಂದರೆ ಕೇವಲ ವಿದೇಶಿ ಆಡಳಿತಗಾರ ದೇಶ ಬಿಟ್ಟು ಹೋಗುವುದೇ? ಅಥವಾ ದೇಶದ ಪ್ರತಿಯೊಬ್ಬ ವ್ಯಕ್ತಿಯೂ ಸಮಾನ ನಾಗರಿಕನಾಗಿ ಬದುಕುವ ಹಕ್ಕು ಪಡೆಯುವುದೂ ಸ್ವಾತಂತ್ರ್ಯದ ಭಾಗವೇ? ಎಂಬುದನ್ನು ಕೇಂದ್ರದಲ್ಲಿಟ್ಟುಕೊಂಡಾಗ ಅಂಬೇಡ್ಕರ್‌ರ ಕೊಡುಗೆ ಭಾರತೀಯ ಸ್ವಾತಂತ್ರ್ಯ ಹೋರಾಟದ ಮತ್ತೊಂದು ಅತ್ಯಂತ ಮಹತ್ವದ ಧಾರೆಯಾಗಿ ಕಾಣಿಸುತ್ತದೆ. ಕೊಲಂಬಿಯಾ ವಿಶ್ವವಿದ್ಯಾಲಯದ ಅಂಬೇಡ್ಕರ್ ಕುರಿತ ದಾಖಲೆಗಳೂ ಅವರನ್ನು ವಸಾಹತು ಭಾರತದಲ್ಲಿ ದಲಿತರ ಹಕ್ಕುಗಳು ಮತ್ತು ಸಾಮಾಜಿಕ ಮಾನ್ಯತೆಗಾಗಿ ಸ್ವತಂತ್ರ ರಾಜಕೀಯ ಹೋರಾಟವನ್ನು ಕಟ್ಟಿದ ಪ್ರಮುಖ ನಾಯಕನೆಂದು ಗುರುತಿಸುತ್ತವೆ.

ಅಂಬೇಡ್ಕರ್‌ರ ರಾಜಕೀಯ ಚಿಂತನೆಯಲ್ಲಿದ್ದ ಯಾರಿಗೆ ಸ್ವಾತಂತ್ರ್ಯ? ಎಂಬ ಪ್ರಶ್ನೆ ಬಹಳ ಸರಳವಾದರೂ ಆ ಕಾಲದ ರಾಷ್ಟ್ರೀಯ ರಾಜಕಾರಣಕ್ಕೆ ಅತ್ಯಂತ ಅಸೌಕರ್ಯಕರವಾಗಿತ್ತು: ಬ್ರಿಟಿಷರಿಂದ ಭಾರತಕ್ಕೆ ಸ್ವಾತಂತ್ರ್ಯ ಬಂದರೆ ಸಾಕೇ, ಅಥವಾ ಭಾರತದೊಳಗಿನ ಶೋಷಿತ ಜನರಿಗೂ ಸ್ವಾತಂತ್ರ್ಯ ಸಿಗಬೇಕೇ? ಎನ್ನುವ ಪ್ರಶ್ನೆಯನ್ನು ಈ ಭಾರತೀಯ ಸಮಾಜದಿಂದ ಅವರಿಗಾದ ಅನುಭವವೇ ಹುಟ್ಟುಹಾಕಿತ್ತು. ಬ್ರಿಟಿಷ್ ಆಳ್ವಿಕೆಯಲ್ಲಿದ್ದ ಭಾರತದಲ್ಲಿ ಒಂದು ಕಡೆ ಭಾರತೀಯರು ವಿದೇಶಿ ಸಾಮ್ರಾಜ್ಯದ ಅಧೀನದಲ್ಲಿದ್ದರು. ಇನ್ನೊಂದು ಕಡೆ ಭಾರತದ ಕೋಟ್ಯಂತರ ದಲಿತರು ತಮ್ಮದೇ ಸಮಾಜದಲ್ಲಿ ಅಸ್ಪೃಶ್ಯರೆಂದು ಪರಿಗಣಿಸಲ್ಪಟ್ಟು ಸಾರ್ವಜನಿಕ ಬಾವಿಯಿಂದ ನೀರು ಕುಡಿಯಲು, ಶಾಲೆಗೆ ಹೋಗಲು, ದೇವಸ್ಥಾನ ಪ್ರವೇಶಿಸಲು, ಸಾರ್ವಜನಿಕ ಸ್ಥಳಗಳನ್ನು ಬಳಸಲು ಮತ್ತು ಗೌರವಯುತವಾಗಿ ಬದುಕಲೂ ಕೂಡ ಅವಕಾಶವಿಲ್ಲದ ಸ್ಥಿತಿಯಲ್ಲಿದ್ದರು.

ಹೀಗಿರುವಾಗ ಬ್ರಿಟಿಷರು ಹೊರಟುಹೋದರೆ ಮಾತ್ರ ದಲಿತನ ಜೀವನದಲ್ಲಿ ನಿಜವಾದ ಸ್ವಾತಂತ್ರ್ಯ ಬರಬಹುದೇ? ಎಂಬುದು ಅಂಬೇಡ್ಕರ್‌ರನ್ನು ಕಾಡುತ್ತಿತ್ತು. ಅದಕ್ಕಾಗಿಯೇ ರಾಜಕೀಯ ಸುಧಾರಣೆಗೆ ಮುಂಚೆ ಅಥವಾ ಅದರ ಜತೆಯಲ್ಲಿಯೇ ಸಾಮಾಜಿಕ ಪುನರ್‌ರಚನೆ ಅಗತ್ಯವೆಂದು ಅವರು ಪ್ರತಿಪಾದಿಸಿದರು. ಅವರ (ಜಾತಿ ವಿನಾಶ) ಕೃತಿಯ ಚಿಂತನೆಯನ್ನೇ ಉಲ್ಲೇಖಿಸುವುದಾದರೆ, ರಾಜಕೀಯ ಸುಧಾರಣೆಯನ್ನು ಸಾಮಾಜಿಕ ಸುಧಾರಣೆಯಿಂದ ಬೇರ್ಪಡಿಸಲಾಗುವುದಿಲ್ಲ ಎಂಬುದಕ್ಕೆ ಅಂಬೇಡ್ಕರ್ ಅವರ ದಾಖಲೆಗಳೇ ಹೇಳುತ್ತವೆ.

ಅಂದರೆ, ಗಾಂಧಿ ನೇತೃತ್ವದ ರಾಷ್ಟ್ರೀಯ ಚಳವಳಿಗೆ ಬ್ರಿಟಿಷ್ ಸಾಮ್ರಾಜ್ಯ ಪ್ರಮುಖ ಎದುರಾಳಿಯಾಗಿದ್ದರೆ, ಅಂಬೇಡ್ಕರ್‌ರ ಹೋರಾಟಕ್ಕೆ ಸಾಮ್ರಾಜ್ಯಶಾಹಿಯ ಜತೆಗೆ ಜಾತಿ ವ್ಯವಸ್ಥೆಯೂ ಒಂದು ಅಧಿಕಾರ ವ್ಯವಸ್ಥೆಯಾಗಿತ್ತು.

ಮತದಾನದ ಹಕ್ಕಿನಿಂದ ಆರಂಭವಾದ ರಾಜಕೀಯ ಹೋರಾಟ

ಅಂಬೇಡ್ಕರ್‌ರ ರಾಜಕೀಯ ಪ್ರವೇಶವನ್ನು ನೋಡಿದರೆ ಆರಂಭದಿಂದಲೇ ಅವರು ಶೋಷಿತ ಸಮುದಾಯಗಳಿಗೆ ಸ್ವತಂತ್ರ ರಾಜಕೀಯ ಧ್ವನಿ ಸಿಗಬೇಕೆಂದು ಬಯಸಿದ್ದದ್ದು ಸ್ಪಷ್ಟವಾಗುತ್ತದೆ.

ಭಾರತದ ಚುನಾವಣಾ ವ್ಯವಸ್ಥೆಯ ಕುರಿತು ಪರಿಶೀಲನೆ ನಡೆಸುತ್ತಿದ್ದ ಸೌತ್‌ಬರೋ ಸಮಿತಿಯ ಮುಂದೆ ಅವರು ಮತದಾನದ ಹಕ್ಕು ಮತ್ತು ರಾಜಕೀಯ ಪ್ರತಿನಿಧಿತ್ವದ ಪ್ರಶ್ನೆಯನ್ನು ಎತ್ತಿದರು. ಸುಪ್ರೀಂ ಕೋರ್ಟ್ ಪ್ರಕಟಿಸಿರುವ ಅವರ ಜೀವನಚರಿತ್ರೆಯ ಪ್ರಕಾರ, ಅವರು ಈ ಅವಧಿಯಲ್ಲೇ ಸಾರ್ವತ್ರಿಕ ವಯಸ್ಕ ಮತದಾನದ ಪರವಾಗಿ ಅಭಿಪ್ರಾಯ ಸಲ್ಲಿಸಿದರು ಎಂಬುದು ಗಮನಾರ್ಹ. ಇದು ಮಹತ್ವದ ಸಂಗತಿ. ಏಕೆಂದರೆ ಆ ಕಾಲದಲ್ಲಿ ಮತದಾನದ ಹಕ್ಕು ಆಸ್ತಿ, ಆದಾಯ, ಶಿಕ್ಷಣ ಮೊದಲಾದ ಅರ್ಹತೆಗಳಿಗೆ ಸೀಮಿತವಾಗಿತ್ತು. ಆದರೆ ಅಂಬೇಡ್ಕರ್‌ರಿಗೆ ಪ್ರಜಾಪ್ರಭುತ್ವ ಎಂದರೆ ಮೇಲ್ವರ್ಗದ ವಿದ್ಯಾವಂತರ ಆಡಳಿತವಲ್ಲ; ಸಮಾಜದ ಕಟ್ಟ-ಕಡೆಯ ವ್ಯಕ್ತಿಗೂ ರಾಜಕೀಯ ಶಕ್ತಿ ದೊರೆಯುವ ವ್ಯವಸ್ಥೆಯಾಗಿತ್ತು.

ಅವರ ಪ್ರಸಿದ್ಧ ಘೋಷಣೆಗಳಲ್ಲಿರುವ '', '', ''(ಶಿಕ್ಷಣ ಪಡೆಯಿರಿ, ಹೋರಾಡಿರಿ, ಸಂಘಟಿತರಾಗಿರಿ) ಎಂಬ ಆಶಯವೂ ಇದೇ ರಾಜಕೀಯ ದೃಷ್ಟಿಯ ಮುಂದುವರೆದಿದೆ.

ಸ್ವಾತಂತ್ರ್ಯ ಹೋರಾಟದೊಳಗಿನ ಮತ್ತೊಂದು ಸ್ವಾತಂತ್ರ್ಯ ಹೋರಾಟ ಮಹಾಡ್ ಸತ್ಯಾಗ್ರಹ

1927ರ ಮಹಾಡ್ ಸತ್ಯಾಗ್ರಹ ಅಂಬೇಡ್ಕರ್‌ರ ರಾಜಕೀಯ ಜೀವನದ ತಿರುವಾಯಿತು. ಮಹಾರಾಷ್ಟ್ರದ ಮಹಾಡ್ ಪಟ್ಟಣದಲ್ಲಿದ್ದ ಚಾವ್ದಾರ್ ಕೆರೆ ಸಾರ್ವಜನಿಕ ಸಂಪನ್ಮೂಲವಾಗಿದ್ದರೂ ದಲಿತರಿಗೆ ಅದರಿಂದ ನೀರು ಕುಡಿಯಲು ಅವಕಾಶವಿರಲಿಲ್ಲ. ಹಾಗಾಗಿ ಅಂಬೇಡ್ಕರ್ ಅವರು ಸಾವಿರಾರು ದಲಿತರೊಂದಿಗೆ ಕೆರೆಯತ್ತ ತೆರಳಿ, ಕೆರೆಯ ನೀರು ಕುಡಿಯುವ ಮೂಲಕ ಮಾನವ ಸಮಾನತೆಯನ್ನು ಘೋಷಿಸಿದರು.

ಸುಪ್ರೀಂ ಕೋರ್ಟ್‌ನ ಅಧಿಕೃತ ದಾಖಲೆಯ ಪ್ರಕಾರ, 1927ರ ಮಾರ್ಚ್ 20ರಂದು ಅಂಬೇಡ್ಕರ್ ಮತ್ತು ಅವರ ಅನುಯಾಯಿಗಳು ಚಾವ್ದಾರ್ ಕೆರೆಯ ನೀರನ್ನು ಕುಡಿಯುವ ಮೂಲಕ ಸಾರ್ವಜನಿಕ ಸಂಪನ್ಮೂಲಗಳ ಮೇಲಿನ ಸಮಾನ ಹಕ್ಕನ್ನು ಪ್ರತಿಪಾದಿಸಿದರು. ನಂತರ ಡಿಸೆಂಬರ್‌ನಲ್ಲಿ ನಡೆದ ಸಮಾವೇಶದಲ್ಲಿ ಮನುಸ್ಮೃತಿಯ ಪ್ರತಿಯನ್ನು ದಹಿಸುವ ಮೂಲಕ ಜಾತಿ ಅಸಮಾನತೆಯನ್ನು ನ್ಯಾಯೀಕರಿಸುವ ಸಾಮಾಜಿಕ ವ್ಯವಸ್ಥೆಯ ವಿರುದ್ಧ ಪ್ರತಿರೋಧ ವ್ಯಕ್ತಪಡಿಸಿರುವುದು ಉಲ್ಲೇಖನೀಯ.

ಈ ಸತ್ಯಾಗ್ರಹದ ಅರ್ಥ ಕೇವಲ ''ನೀರು ಕುಡಿಯುವ ಹಕ್ಕು'' ಅಲ್ಲ. ನಾವೂ ಮನುಷ್ಯರು; ಸಾರ್ವಜನಿಕ ಬದುಕಿನಲ್ಲಿ ನಮಗೂ ಸಮಾನ ಸ್ಥಾನವಿದೆ'' ಎಂಬ ನಾಗರಿಕ ಹಕ್ಕಿನ ಘೋಷಣೆ. ಇದರಿಂದ ಬ್ರಿಟಿಷರ ವಿರುದ್ಧ ಉಪ್ಪಿನ ಸತ್ಯಾಗ್ರಹ ಹೇಗೆ ವಸಾಹತುಶಾಹಿ ಅಧಿಕಾರಕ್ಕೆ ಸವಾಲು ಹಾಕಿತೋ, ಮಹಾಡ್ ಸತ್ಯಾಗ್ರಹ ಭಾರತೀಯ ಸಮಾಜದೊಳಗಿನ ಜಾತಿ ಅಧಿಕಾರಕ್ಕೆ ಸವಾಲು ಹಾಕಿತು ಎಂಬುದು ಇದರಿಂದ ತಿಳಿಯುತ್ತದೆ.

ಮುಂದೆ ನಾಸಿಕ್‌ನ ಕಾಳರಾಮ ದೇವಸ್ಥಾನ ಪ್ರವೇಶ ಚಳವಳಿ ಸೇರಿದಂತೆ ಹಲವು ಹೋರಾಟಗಳ ಮೂಲಕ ಅಂಬೇಡ್ಕರ್ ಸಾಮಾಜಿಕ ಸಮಾನತೆಯನ್ನು ಸಾರ್ವಜನಿಕ ರಾಜಕೀಯದ ಕೇಂದ್ರಕ್ಕೆ ತಂದರು.

ಕಾಂಗ್ರೆಸ್‌ನಿಂದ ಸ್ವತಂತ್ರವಾದ ದಲಿತ ರಾಜಕೀಯ ಏಕೆ?

ದಲಿತರ ಭವಿಷ್ಯವನ್ನು ಕಾಂಗ್ರೆಸ್, ಹಿಂದೂ ಮೇಲ್ವರ್ಗ ಅಥವಾ ಬ್ರಿಟಿಷ್ ಸರ್ಕಾರ ಯಾರೊಬ್ಬರ ಕೃಪೆಗೂ ಒಪ್ಪಿಸಬಾರದು ಎಂಬುದು ಅಂಬೇಡ್ಕರ್‌ರ ಪ್ರಮುಖ ರಾಜಕೀಯ ನಿಲುವುಗಳಲ್ಲಿ ಒಂದು.

1930ರ ನಾಗಪುರದ (ಶೋಷಿತ ವರ್ಗಗಳ ಕಾಂಗ್ರೆಸ್)ನಲ್ಲಿ ಅವರು ಒಂದೆಡೆ ಬ್ರಿಟಿಷ್ ವಸಾಹತು ಆಡಳಿತದ ದುಷ್ಪರಿಣಾಮಗಳನ್ನೂ ಟೀಕಿಸಿದರು; ಇನ್ನೊಂದೆಡೆ ದಲಿತರು ಸರ್ಕಾರ ಮತ್ತು ಕಾಂಗ್ರೆಸ್ ಎರಡರಿಂದಲೂ ರಾಜಕೀಯವಾಗಿ ಸ್ವತಂತ್ರವಾಗಿ ಸಂಘಟಿಸಿಕೊಳ್ಳಬೇಕೆಂತಲೂ ಹೇಳಿದರು. ಕೊಲಂಬಿಯಾ ವಿಶ್ವವಿದ್ಯಾಲಯದ ಅಂಬೇಡ್ಕರ್ ಕಾಲರೇಖೆಯೂ ಈ ನಿಲುವನ್ನು ದಾಖಲಿಸಿದೆ. ಇಲ್ಲಿಯೇ ಅಂಬೇಡ್ಕರ್ ಮತ್ತು ಕಾಂಗ್ರೆಸ್ ನಾಯಕತ್ವದ ನಡುವೆ ಮೂಲಭೂತ ವ್ಯತ್ಯಾಸ ಕಾಣಿಸುತ್ತದೆ.

ಕಾಂಗ್ರೆಸ್ ತನ್ನನ್ನು ಭಾರತದ ಜನರ ರಾಷ್ಟ್ರೀಯ ಪ್ರತಿನಿಧಿಯಾಗಿ ಕಂಡರೂ ದಲಿತರು ತಮ್ಮ ಪ್ರತಿನಿಧಿಗಳನ್ನು ತಾವೇ ಆಯ್ಕೆ ಮಾಡದಿದ್ದರೆ, ಮೇಲ್ಜಾತಿಯ ಬಹುಮತ ಆಯ್ಕೆ ಮಾಡುವ ವ್ಯಕ್ತಿಯೇ ಅವರ ನಿಜವಾದ ಪ್ರತಿನಿಧಿಯಾಗಲು ಹೇಗೆ ಸಾಧ್ಯ ಎಂಬುದನ್ನು ಅಂಬೇಡ್ಕರ್ ಪ್ರಶ್ನಿಸಿದ್ದರು. ಇದು ಅವರ ಮುಂದಿನ ರಾಜಕೀಯ ಹೋರಾಟದ ಕೇಂದ್ರ ವಿಷಯವಾಯಿತು.

ಸೈಮನ್ ಆಯೋಗ ಮತ್ತು ಅಂಬೇಡ್ಕರ್

1928ರಲ್ಲಿ ಭಾರತೀಯ ಸಂವಿಧಾನಾತ್ಮಕ ಸುಧಾರಣೆಗಳನ್ನು ಪರಿಶೀಲಿಸಲು ಬಂದ ಸೈಮನ್ ಆಯೋಗದ ಮುಂದೆ ಅಂಬೇಡ್ಕರ್ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು. ನಂತರ 193032ರ ಲಂಡನ್ ದುಂಡುಮೇಜಿನ ಸಮ್ಮೇಳನಗಳಲ್ಲಿಯೂ ಅವರು ಶೋಷಿತ ವರ್ಗಗಳ ಪ್ರತಿನಿಧಿಯಾಗಿ ಭಾಗವಹಿಸಿದರು. ಇದನ್ನೇ ನಂತರದ ಕಾಲದಲ್ಲಿ ಅಂಬೇಡ್ಕರ್ ವಿರೋಧಿಗಳು ಅವರು ಬ್ರಿಟಿಷರೊಂದಿಗೆ ಕೆಲಸ ಮಾಡಿದರು ಎಂಬ ಆರೋಪಕ್ಕೆ ಬಳಸಿಕೊಂಡರು.

ಆದರೆ ಅಂಬೇಡ್ಕರ್‌ರ ದೃಷ್ಟಿಯಲ್ಲಿ ಪ್ರಶ್ನೆ ಬೇರೆಯೇ ಇತ್ತು. ಭಾರತಕ್ಕೆ ರೂಪುಗೊಳ್ಳಲಿರುವ ಯಾವುದೇ ಹೊಸ ಆಡಳಿತ ವ್ಯವಸ್ಥೆಯಲ್ಲಿ ದಲಿತರಿಗೆ ರಾಜಕೀಯ ಭದ್ರತೆ ಇಲ್ಲದಿದ್ದರೆ, ಬ್ರಿಟಿಷ್ ಆಡಳಿತದ ಜಾಗದಲ್ಲಿ ಸಾಮಾಜಿಕವಾಗಿ ಪ್ರಬಲ ಜಾತಿಗಳ ಆಡಳಿತ ಬಂದರೂ ದಲಿತರ ಪರಿಸ್ಥಿತಿ ಮೂಲಭೂತವಾಗಿ ಬದಲಾಗುವುದಿಲ್ಲ ಎಂಬುದು ಅವರ ಆತಂಕವಾಗಿತ್ತು.

ಹೀಗಾಗಿ ಬ್ರಿಟಿಷರೊಂದಿಗೆ ನಡೆದ ಸಂವಿಧಾನಾತ್ಮಕ ಮಾತುಕತೆಯ ವೇದಿಕೆಯನ್ನು ಅವರು ಬ್ರಿಟಿಷ್ ಆಳ್ವಿಕೆಯನ್ನು ಶಾಶ್ವತಗೊಳಿಸುವುದಕ್ಕಾಗಿ ಅಲ್ಲ, ಸ್ವತಂತ್ರ ಭಾರತದ ಭವಿಷ್ಯದ ಅಧಿಕಾರ ಹಂಚಿಕೆಯಲ್ಲಿ ಅಸ್ಪೃಶ್ಯ ಸಮುದಾಯಗಳ ಸ್ಥಾನವನ್ನು ಖಚಿತಪಡಿಸಲು ಬಳಸಿದರು ಎಂಬುದು ಅವರ ರಾಜಕೀಯದ ಸ್ವರೂಪವನ್ನು ಹೆಚ್ಚು ಸಮರ್ಪಕವಾಗಿ ವಿವರಿಸುತ್ತದೆ.

ದುಂಡುಮೇಜಿನ ಸಮ್ಮೇಳನ: ಭಾರತ ಮಾತ್ರವಲ್ಲ, ದಲಿತ ಭಾರತದ ಧ್ವನಿ

1930ರಿಂದ 1932ರವರೆಗೆ ಲಂಡನ್‌ನಲ್ಲಿ ನಡೆದ ದುಂಡುಮೇಜಿನ ಸಮ್ಮೇಳನಗಳು ಅಂಬೇಡ್ಕರ್‌ರನ್ನು ಅಖಿಲ ಭಾರತೀಯ ಮಟ್ಟದ ನಾಯಕನನ್ನಾಗಿಸಿದವು. ಅಲ್ಲಿ ಅಂಬೇಡ್ಕರ್ ಎಂದು ಕರೆಯಲ್ಪಡುತ್ತಿದ್ದ ದಲಿತರಿಗೆ ಪ್ರತ್ಯೇಕ ರಾಜಕೀಯ ಪ್ರತಿನಿಧಿತ್ವ ಬೇಕೆಂದು ಬಲವಾಗಿ ವಾದಿಸಿದರು. ಏಕೆಂದರೆ, ರಾಜಕೀಯ ಶಕ್ತಿಯಿಲ್ಲದೆ ಸಾಮಾಜಿಕವಾಗಿ ಶೋಷಿತ ವರ್ಗಗಳು ಮೇಲ್ಜಾತಿ ಪ್ರಾಬಲ್ಯದಿಂದ ಮುಕ್ತರಾಗಲು ಸಾಧ್ಯವಿಲ್ಲ ಎಂಬುದನ್ನು ಅವರು ಅರಿತಿದ್ದರು.

ಅದರ ಭಾಗವಾಗಿಯೇ ಅವರು ಪ್ರತ್ಯೇಕ ಮತದಾರ ಮಂಡಳಿ (ಪ್ರತ್ಯೇಕ ಮತದಾರರ ಕ್ಷೇತ್ರ)ನ ಬೇಡಿಕೆಯನ್ನು ಮುಂದಿಟ್ಟರು. ದಲಿತ ಮತದಾರರು ತಮ್ಮ ಪ್ರತಿನಿಧಿಗಳನ್ನು ಸ್ವತಂತ್ರವಾಗಿ ಆಯ್ಕೆ ಮಾಡುವ ವ್ಯವಸ್ಥೆ ಬೇಕೆಂಬುದು ಅದರ ಉದ್ದೇಶವಾಗಿತ್ತು. ಅಂಬೇಡ್ಕರ್ ಈ ವ್ಯವಸ್ಥೆಯಲ್ಲಿ ದಲಿತರನ್ನು ಪ್ರತ್ಯೇಕಿಸುವ ಕ್ರಮವಾಗಿ ನೋಡಲಿಲ್ಲ; ಅವರ ರಾಜಕೀಯ ಸ್ವಾಯತ್ತತೆಗೆ ಅಗತ್ಯವಾದ ರಕ್ಷಣೆಯೆಂದು ಪರಿಗಣಿಸಿದರು.

ಗಾಂಧಿಅಂಬೇಡ್ಕರ್ ಸಂಘರ್ಷ ಮತ್ತು ಪೂನಾ ಒಪ್ಪಂದ

1932ರಲ್ಲಿ ಬ್ರಿಟಿಷ್ ಪ್ರಧಾನಿ ರಾಮ್ಸೆ ಮ್ಯಾಕ್‌ಡೊನಾಲ್ಡ್ ಘೋಷಿಸಿದ ಕಮ್ಯುನಲ್ ಅವಾರ್ಡ್( ) ಅಡಿಯಲ್ಲಿ ಬ್ರಾಹ್ಮಣೇತರರಲ್ಲದ ಮತ್ತು ದಲಿತ ವರ್ಗದವರಾದ ಶೋಷಿತ ಸಮುದಾಯಗಳಿಗೆ( ) ಪ್ರತ್ಯೇಕ ಮತಕ್ಷೇತ್ರಗಳನ್ನು ಹಾಗೂ 78 ಮೀಸಲು ಸ್ಥಾನಗಳನ್ನು ನೀಡಲಾಯಿತು. ಈ ವ್ಯವಸ್ಥೆಯ ಮೂಲಕ ಅವರು ತಮ್ಮದೇ ಪ್ರತಿನಿಧಿಯನ್ನು ಆಯ್ಕೆ ಮಾಡಲು ಮತ್ತು ಎರಡು ಮತಗಳ ಹಕ್ಕನ್ನು( ) ಪಡೆಯಲು ಅವಕಾಶ ಕಲಿಸಲಾಗಿತ್ತು. ಆದರೆ, ಮಹಾತ್ಮ ಗಾಂಧೀಜಿ ಇದನ್ನು ತೀವ್ರವಾಗಿ ವಿರೋಧಿಸಿದರು. ಅಲ್ಲದೆ ಅವರು ಯರವಾಡ ಜೈಲಿನಲ್ಲಿ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಇದರಿಂದಾಗಿ ಅಂಬೇಡ್ಕರ್‌ರ ಮೇಲೆ ಅಪಾರ ಒತ್ತಡ ಉಂಟಾಯಿತು.

ಕೊನೆಗೆ 1932ರ ಸೆಪ್ಟೆಂಬರ್‌ನಲ್ಲಿ ಪೂನಾ ಒಪ್ಪಂದವಾಯಿತು. ಪ್ರತ್ಯೇಕ ಮತದಾರ ಮಂಡಳಿಯ ಬೇಡಿಕೆಯನ್ನು ಕೈಬಿಡಲಾಯಿತು; ಬದಲಾಗಿ ಜಂಟಿ ಮತದಾರ ವ್ಯವಸ್ಥೆಯೊಳಗೆ ದಲಿತರಿಗೆ ಮೀಸಲು ಸ್ಥಾನಗಳ ಸಂಖ್ಯೆಯನ್ನು ಹೆಚ್ಚಿಸಲಾಯಿತು. ಪೂನಾ ಒಪ್ಪಂದವು ಪ್ರಾಂತೀಯ ವಿಧಾನಸಭೆಗಳಲ್ಲಿ ಗೆ 148 ಮೀಸಲು ಸ್ಥಾನಗಳನ್ನು ಒದಗಿಸಿತು.

ಈ ಘಟನೆಯನ್ನು ಗಾಂಧಿ ಮತ್ತು ಅಂಬೇಡ್ಕರ್ ಒಟ್ಟಾಗಿ ಬ್ರಿಟಿಷರ --(ಒಡೆದು ಆಳುವುದು) ಯೋಜನೆಯನ್ನು ಸೋಲಿಸಿದರು ಎಂದು ಸರಳವಾಗಿ ಹೇಳುವುದು ಇತಿಹಾಸಕ್ಕೆ ಸರಿಹೊಂದುವುದಿಲ್ಲ. ಅಂಬೇಡ್ಕರ್ ನಂತರವೂ ಪ್ರತ್ಯೇಕ ರಾಜಕೀಯ ಪ್ರತಿನಿಧಿತ್ವದ ತಮ್ಮ ಮೂಲ ವಾದವನ್ನು ಬಿಟ್ಟುಬಿಟ್ಟಿರಲಿಲ್ಲ ಮತ್ತು ಪೂನಾ ಒಪ್ಪಂದದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದರು.

ಸಂಖ್ಯಾತ್ಮಕ ಬಹುಮತದ ಆಡಳಿತವೇ ಪ್ರಜಾಪ್ರಭುತ್ವವಲ್ಲ; ಅಲ್ಪಸಂಖ್ಯಾತ ಹಾಗೂ ಶೋಷಿತ ಸಮುದಾಯಗಳಿಗೆ ನಿಜವಾದ ರಾಜಕೀಯ ಧ್ವನಿ ಇರಬೇಕು. ಎಂಬುದರಲ್ಲಿ ಅಂಬೇಡ್ಕರ್ ಅವರ ಸ್ವಾತಂತ್ರ್ಯದ ಪರಿಕಲ್ಪನೆ ಸ್ಪಷ್ಟವಾಗುತ್ತದೆ,

ಕ್ವಿಟ್ ಇಂಡಿಯಾ ಚಳವಳಿ: ಅಂಬೇಡ್ಕರ್‌ರ ಅತ್ಯಂತ ವಿವಾದಾತ್ಮಕ ನಿಲುವು

ಅಂಬೇಡ್ಕರ್‌ರ ಸ್ವಾತಂತ್ರ್ಯ ಹೋರಾಟದ ಪಾತ್ರವನ್ನು ಚರ್ಚಿಸುವಾಗ 1942ರ ಕ್ವಿಟ್ ಇಂಡಿಯಾ ಚಳವಳಿಯ ಬಗ್ಗೆ ಮಾತನಾಡದೆ ಇರುವುದು ಇತಿಹಾಸವನ್ನು ಅರ್ಧಕ್ಕೇ ಬಿಟ್ಟಂತಾಗುತ್ತದೆ.

ಮಹಾತ್ಮ ಗಾಂಧಿ ಮತ್ತು ಕಾಂಗ್ರೆಸ್ ಬ್ರಿಟಿಷರು ಭಾರತ ಬಿಟ್ಟು ತೊಲಗಲಿ ಎಂಬ ಘೋಷಣೆಯೊಂದಿಗೆ ಕ್ವಿಟ್ ಇಂಡಿಯಾ ಚಳವಳಿ ಆರಂಭಿಸಿದಾಗ ಅಂಬೇಡ್ಕರ್ ಅದನ್ನು ಬೆಂಬಲಿಸಲಿಲ್ಲ. ಅದರ ಕಾರ್ಯತಂತ್ರವನ್ನು ಅವರು ತೀವ್ರವಾಗಿ ಟೀಕಿಸಿದರು. ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಜಪಾನ್ ಹಾಗೂ ಫ್ಯಾಸಿಸ್ಟ್ ಶಕ್ತಿಗಳ ಬೆದರಿಕೆಯ ನಡುವೆ ಆಡಳಿತ ವ್ಯವಸ್ಥೆಯನ್ನು ಅಸ್ಥಿರಗೊಳಿಸುವುದು ಭಾರತವನ್ನು ಇನ್ನಷ್ಟು ಅಪಾಯಕ್ಕೆ ಸಿಲುಕಿಸಬಹುದು ಎಂಬುದು ಅವರ ವಾದದ ಒಂದು ಭಾಗವಾಗಿತ್ತು. ಅಂಬೇಡ್ಕರ್‌ರ ಕ್ವಿಟ್ ಇಂಡಿಯಾ ವಿರೋಧವನ್ನು ಇತಿಹಾಸ ಅಧ್ಯಯನಗಳೂ ಸ್ಪಷ್ಟವಾಗಿ ದಾಖಲಿಸಿವೆ.

ಅದೇ 1942ರಲ್ಲಿ ಅವರು ಬ್ರಿಟಿಷ್ ಭಾರತದ ವೈಸರಾಯ್ ಕಾರ್ಯಕಾರಿ ಮಂಡಳಿಯಲ್ಲಿ ಕಾರ್ಮಿಕರ ಸದಸ್ಯ( )ರಾಗಿ ಸೇರಿದರು. 1946ರವರೆಗೆ ಅದೇ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದರು. ಇದು ಅಂಬೇಡ್ಕರ್‌ರ ರಾಜಕೀಯ ಜೀವನದ ಅತ್ಯಂತ ಹೆಚ್ಚು ಚರ್ಚೆಗೆ ಒಳಗಾಗುವ ಅಧ್ಯಾಯ. ಆದರೆ ಅದರ ಹಿನ್ನೆಲೆಯನ್ನೂ ನೋಡಬೇಕು.

ಹಾಗಾದರೆ ಅಂಬೇಡ್ಕರ್ ಬ್ರಿಟಿಷ್ ಪರವಾಗಿದ್ದರೇ? ಎನ್ನುವುದಾದರೆ ಹೌದು ಅಥವಾ ಇಲ್ಲ ಎಂಬ ಉತ್ತರ ಇತಿಹಾಸದ ಸಂಕೀರ್ಣತೆಯನ್ನು ಹಿಡಿಯುವುದಿಲ್ಲ. ಏಕೆಂದರೆ ಅಂಬೇಡ್ಕರ್ ಬ್ರಿಟಿಷ್ ಸಾಮ್ರಾಜ್ಯವನ್ನು ಭಾರತದ ಆದರ್ಶ ಆಡಳಿತವೆಂದು ಪರಿಗಣಿಸಿದವರಲ್ಲ. ವಸಾಹತು ಆಡಳಿತದ ಆರ್ಥಿಕ ಮತ್ತು ರಾಜಕೀಯ ವೈಫಲ್ಯಗಳನ್ನು ಟೀಕಿಸಿದರು. ಆದರೆ ಕಾಂಗ್ರೆಸ್ ಹೇಳಿದ ಪ್ರತಿಯೊಂದು ಬ್ರಿಟಿಷ್ ವಿರೋಧಿ ಹೋರಾಟದ ವಿಧಾನವನ್ನೂ ಒಪ್ಪಿಕೊಂಡವರೂ ಅಲ್ಲ. ಆದರೂ ಅವರ ರಾಜಕೀಯದಲ್ಲಿ ಬ್ರಿಟಿಷರು ಹೊರಟುಹೋದ ನಂತರ ಅಧಿಕಾರ ಯಾರ ಕೈಗೆ ಹೋಗುತ್ತದೆ? ಎಂಬ ಒಂದು ನಿರಂತರ ಎಚ್ಚರಿಕೆ ಇತ್ತು.

ಭಾರತದ ಸಾಮಾಜಿಕ ರಚನೆ ಬದಲಾಗದೆ ಅಧಿಕಾರ ಮೇಲ್ಜಾತಿ ಮತ್ತು ಆರ್ಥಿಕವಾಗಿ ಪ್ರಬಲ ಗುಂಪುಗಳ ಕೈಯಲ್ಲಿ ಕೇಂದ್ರೀಕೃತವಾದರೆ ಅದನ್ನು ದಲಿತರು ಸ್ವರಾಜ್ಯ ಎಂದು ಹೇಗೆ ಅನುಭವಿಸಬೇಕು ಎಂಬುದು ಅವರ ಪ್ರಶ್ನೆಯಾಗಿತ್ತು. ಅಂಬೇಡ್ಕರ್‌ಗೆ ವಿದೇಶಿ ಆಡಳಿತ ವಿರುದ್ಧ ಭಾರತೀಯ ಆಡಳಿತ ಎಂಬುದು ಮಾತ್ರ ಪ್ರಶ್ನೆಯಾಗಿರಲಿಲ್ಲ. ಅವರಿಗೆ ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನ ಮೇಲೆ ಪ್ರಭುತ್ವ ಸಾಧಿಸದ ಸಮಾಜ ಹೇಗೆ ನಿರ್ಮಾಣವಾಗಬೇಕು? ಎಂಬುದು ಇನ್ನೂ ದೊಡ್ಡ ಪ್ರಶ್ನೆಯಾಗಿತ್ತು.

ಇದಕ್ಕಾಗಿಯೇ ಕೆಲವೊಮ್ಮೆ ಅವರು ಬ್ರಿಟಿಷ್ ಸರ್ಕಾರದೊಂದಿಗೆ ಮಾತುಕತೆ ನಡೆಸಿದರು; ಕೆಲವೊಮ್ಮೆ ಅದೇ ಸರ್ಕಾರದ ನೀತಿಗಳನ್ನು ಟೀಕಿಸಿದರು; ಕಾಂಗ್ರೆಸ್‌ನ್ನು ಟೀಕಿಸಿದರು; ಗಾಂಧಿಯವರೊಂದಿಗೆ ಸಂಘರ್ಷಿಸಿದರು; ಕಾರ್ಮಿಕರ ಪರವಾಗಿ ರಾಜಕೀಯ ಪಕ್ಷ ಕಟ್ಟಿದರು; ದಲಿತರಿಗೆ ಸ್ವತಂತ್ರ ರಾಜಕೀಯ ಸಂಘಟನೆ ನಿರ್ಮಿಸಿದರು. ಏಕೆಂದರೆ ಅವರ ರಾಜಕೀಯದ ಸ್ಥಿರತೆ ಬ್ರಿಟಿಷ್ ಸರ್ಕಾರವೂ ಅಲ್ಲ, ಕಾಂಗ್ರೆಸ್ ಕೂಡ ಅಲ್ಲ; ಶೋಷಿತ ಜನರ ರಾಜಕೀಯ ಸ್ವಾಯತ್ತತೆ ಕೇಂದ್ರಬಿಂದುವಾಗಿತ್ತು.

ಅಂಬೇಡ್ಕರ್ ಮತ್ತು ಗಾಂಧಿ: ವಿರುದ್ಧ ದಾರಿಗಳಲ್ಲಿದ್ದರೂ ಒಂದೇ ಭಾರತದ ಪ್ರಶ್ನೆ

ಗಾಂಧಿ ಮತ್ತು ಅಂಬೇಡ್ಕರ್ ನಡುವಿನ ಸಂಘರ್ಷವನ್ನು ವೈಯಕ್ತಿಕ ವೈರವಾಗಿ ನೋಡುವುದು ಸರಿಯಲ್ಲ. ಗಾಂಧಿ ಅಸ್ಪೃಶ್ಯತೆಯನ್ನು ಹಿಂದೂ ಸಮಾಜದ ಪಾಪವೆಂದು ಪರಿಗಣಿಸಿ ಅದನ್ನು ಸುಧಾರಿಸಲು ಬಯಸಿದರು. ಅಂಬೇಡ್ಕರ್ ಜಾತಿ ವ್ಯವಸ್ಥೆಯ ರಚನೆಯನ್ನೇ ಪ್ರಶ್ನಿಸಿ ಅದನ್ನು ನಿರ್ಮೂಲನೆ ಮಾಡಬೇಕೆಂದರು.

ಗಾಂಧಿ ಸಮಾಜದ ಹೃದಯ ಪರಿವರ್ತನೆಗೆ ಹೆಚ್ಚಿನ ಮಹತ್ವ ನೀಡಿದರೆ, ಅಂಬೇಡ್ಕರ್ ಕಾನೂನು, ರಾಜಕೀಯ ಶಕ್ತಿ, ಪ್ರತಿನಿಧಿತ್ವ ಮತ್ತು ನಾಗರಿಕ ಹಕ್ಕುಗಳ ಭದ್ರತೆಗೆ ಹೆಚ್ಚಿನ ಮಹತ್ವ ನೀಡಿದರು. ಗಾಂಧಿಯವರಿಗೆ ರಾಷ್ಟ್ರೀಯ ಏಕತೆ ಪ್ರಮುಖವಾಗಿದ್ದರೆ, ಅಂಬೇಡ್ಕರ್‌ರಿಗೆ ಸಮಾನತೆ ಇಲ್ಲದ ಏಕತೆ ಅಪಾಯಕಾರಿ ಎನ್ನುವುದಾಗಿತ್ತು. ಹೀಗಾಗಿ ಅವರಿಬ್ಬರ ನಡುವಿನ ವಿವಾದವು ಭಾರತೀಯ ಸ್ವಾತಂತ್ರ್ಯ ಹೋರಾಟದೊಳಗಿನ ಮಹತ್ವದ ತಾತ್ವಿಕ ಚರ್ಚೆಯಾಗಿತ್ತು.

ಮೊದಲು ದೇಶಕ್ಕೆ ಸ್ವಾತಂತ್ರ್ಯವೇ?

ಮೊದಲು ಸಮಾಜಕ್ಕೆ ಸಮಾನತೆಯೇ?

ಅಥವಾ ಎರಡನ್ನೂ ಒಂದೇ ಸಮಯದಲ್ಲಿ ಸಾಧಿಸಬೇಕೇ? ಎಂಬ ಪ್ರಶ್ನೆಗೆ ಅಂಬೇಡ್ಕರ್‌ರ ಉತ್ತರ ಮೂರನೆಯದಾಗಿತ್ತು.

ಸ್ವಾತಂತ್ರ್ಯದ ಮುನ್ನಡೆ ಸಂವಿಧಾನದತ್ತ

1946ರಲ್ಲಿ ಅಂಬೇಡ್ಕರ್ ಸಂವಿಧಾನ ಸಭೆಗೆ ಆಯ್ಕೆಯಾದರು. 1947ರ ಆಗಸ್ಟ್ 15ರಂದು ಅವರು ಸ್ವತಂತ್ರ ಭಾರತದ ಮೊದಲ ಕಾನೂನು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ನಂತರ ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿ ಭಾರತದ ಸಂವಿಧಾನ ರಚನೆಯ ಪ್ರಕ್ರಿಯೆಯನ್ನು ಮುನ್ನಡೆಸಿದರು. ಇದು ಅಂಬೇಡ್ಕರ್‌ರ ಸ್ವಾತಂತ್ರ್ಯ ಹೋರಾಟದ ಕೊನೆಯ ಮತ್ತು ಅತ್ಯಂತ ಮಹತ್ವದ 1920ರ ದಶಕದಲ್ಲಿ ಸಾರ್ವಜನಿಕ ಕೆರೆಯ ನೀರಿಗೆ ಹಕ್ಕು ಕೇಳಿದ ವ್ಯಕ್ತಿಯೇ 1940ರ ದಶಕದ ಅಂತ್ಯದಲ್ಲಿ ಪ್ರತಿಯೊಬ್ಬ ಭಾರತೀಯನೂ ಕಾನೂನಿನ ಮುಂದೆ ಸಮಾನ ಎಂಬ ಗಣರಾಜ್ಯದ ಸಂವಿಧಾನ ರೂಪಿಸುವ ಕೇಂದ್ರ ಸ್ಥಾನಕ್ಕೆ ಬಂದರು.

ಅಸ್ಪೃಶ್ಯತೆ ನಿಷೇಧ, ಕಾನೂನಿನ ಮುಂದೆ ಸಮಾನತೆ, ಧರ್ಮಜಾತಿಲಿಂಗ ಆಧಾರಿತ ಭೇದಭಾವಕ್ಕೆ ನಿರ್ಬಂಧ, ಮೂಲಭೂತ ಹಕ್ಕುಗಳು, ಸಂವಿಧಾನಾತ್ಮಕ ಪರಿಹಾರದ ಹಕ್ಕು, ಹಿಂದುಳಿದ ಸಮುದಾಯಗಳ ಪ್ರತಿನಿಧಿತ್ವ ಮತ್ತು ಪ್ರಜಾಪ್ರಭುತ್ವದ ಸಂಸ್ಥೆಗಳು ಇವೆಲ್ಲವೂ ಸ್ವಾತಂತ್ರ್ಯವನ್ನು ಕೇವಲ ಬ್ರಿಟಿಷ್ ಧ್ವಜ ಇಳಿಸುವುದರಿಂದ ಮೀರಿದ ನಾಗರಿಕ ಸ್ವಾತಂತ್ರ್ಯವನ್ನಾಗಿ ರೂಪಿಸಿದವು.

ಅಂಬೇಡ್ಕರ್‌ರ ದೃಷ್ಟಿಯಲ್ಲಿ ರಾಜಕೀಯ ಪ್ರಜಾಪ್ರಭುತ್ವ ಮಾತ್ರ ಸಾಕಾಗುವುದಿಲ್ಲ. ಅದರ ತಳಹದಿಯಲ್ಲಿ ಸಾಮಾಜಿಕ ಪ್ರಜಾಪ್ರಭುತ್ವ ಇರಬೇಕು; ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳು ಒಂದನ್ನೊಂದು ಬಿಟ್ಟಿರಲು ಸಾಧ್ಯವಿಲ್ಲ ಎಂದು ಅವರು ಸಂವಿಧಾನ ಸಭೆಯಲ್ಲಿ ಎಚ್ಚರಿಸಿದ್ದರು. ಸುಪ್ರೀಂ ಕೋರ್ಟ್‌ನ ಅಂಬೇಡ್ಕರ್ ದಾಖಲೆಗಳಲ್ಲಿಯೂ ಈ ಭಾಷಣವನ್ನು ದಾಖಲಿಸಲಾಗಿದೆ.

ಹಾಗಾದರೆ ಅಂಬೇಡ್ಕರ್‌ರನ್ನು ಸ್ವಾತಂತ್ರ್ಯ ಹೋರಾಟಗಾರ ಎಂದು ಕರೆಯಬಹುದೇ?

ಇದು ಮುಖ್ಯವಾಗಿ ನಾವು ಸ್ವಾತಂತ್ರ್ಯ ಹೋರಾಟವನ್ನು ಹೇಗೆ ವ್ಯಾಖ್ಯಾನಿಸುತ್ತೇವೆ ಎಂಬುದರ ಮೇಲೆ ಅವಲಂಬಿಸಿದೆ. ಸ್ವಾತಂತ್ರ್ಯ ಹೋರಾಟ ಎಂದರೆ ಕೇವಲ ಕಾಂಗ್ರೆಸ್ ನೇತೃತ್ವದ ಅಸಹಕಾರ ಚಳವಳಿ, ಉಪ್ಪಿನ ಸತ್ಯಾಗ್ರಹ, ನಾಗರಿಕ ಅಸಹಕಾರ ಮತ್ತು ಕ್ವಿಟ್ ಇಂಡಿಯಾ ಚಳವಳಿಗಳಲ್ಲಿ ನೇರವಾಗಿ ಭಾಗವಹಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ಬಂಧನಕ್ಕೊಳಗಾಗುವುದಷ್ಟೇ ಎಂದು ವ್ಯಾಖ್ಯಾನಿಸಿದರೆ ಅಂಬೇಡ್ಕರ್‌ರನ್ನು ಗಾಂಧಿ, ನೆಹರು ಅಥವಾ ಪಟೇಲರ ಮಾದರಿಯ ಸ್ವಾತಂತ್ರ್ಯ ಹೋರಾಟಗಾರ ಎಂದು ಹೇಳುವುದು ಇತಿಹಾಸಾತ್ಮಕವಾಗಿ ಸರಿಯಾಗುವುದಿಲ್ಲ. ಅವರು ಕಾಂಗ್ರೆಸ್‌ನ ಪ್ರಮುಖ ಜನಾಂದೋಲನಗಳಿಂದ ಸ್ವತಂತ್ರವಾಗಿದ್ದರು ಮತ್ತು ಕೆಲವು ಸಂದರ್ಭಗಳಲ್ಲಿ ಅವುಗಳನ್ನು ನೇರವಾಗಿ ವಿರೋಧಿಸಿದ್ದರು.

ಆದರೆ ಭಾರತದ ಸ್ವಾತಂತ್ರ್ಯ ಹೋರಾಟವನ್ನು ವಸಾಹತುಶಾಹಿಯಿಂದ ಮುಕ್ತಿಗೊಳಿಸುವುದರ ಜತೆಗೆ, ಭಾರತೀಯ ಸಮಾಜವನ್ನು ಪ್ರಜಾಪ್ರಭುತ್ವ, ಸಮಾನತೆ ಮತ್ತು ನಾಗರಿಕ ಹಕ್ಕುಗಳ ಆಧಾರದಲ್ಲಿ ಪುನರ್‌ನಿರ್ಮಿಸುವ ದೀರ್ಘ ಹೋರಾಟ ಎಂದು ನೋಡಿದರೆ ಅಂಬೇಡ್ಕರ್ ಅದರ ಅತ್ಯಂತ ಪ್ರಮುಖ ನಿರ್ಮಾತೃಗಳಲ್ಲಿ ಒಬ್ಬರು.

ಗಾಂಧಿಯವರ ಹೋರಾಟವು ಬ್ರಿಟಿಷರಿಗೆ ಭಾರತ ಬಿಟ್ಟು ಹೋಗಿ ಎಂದು ಹೇಳಿದರೆ, ಅಂಬೇಡ್ಕರ್‌ರ ಹೋರಾಟವು, ಸ್ವತಂತ್ರವಾಗಲಿದ್ದ ಭಾರತಕ್ಕೆ: ನಿಮ್ಮದೇ ದೇಶದ ಕೋಟ್ಯಂತರ ಜನರನ್ನು ಸಮಾನ ಮನುಷ್ಯರೆಂದು ಸ್ವೀಕರಿಸಿ ಎಂದು ಸವಾಲು ಹಾಕಿತು. ಮೊದಲನೆಯ ಹೋರಾಟವಿಲ್ಲದೆ ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ಸಾಧ್ಯವಾಗುತ್ತಿರಲಿಲ್ಲ. ಎರಡನೆಯ ಹೋರಾಟವಿಲ್ಲದೆ ಆ ರಾಜಕೀಯ ಸ್ವಾತಂತ್ರ್ಯ ಕೋಟ್ಯಂತರ ಶೋಷಿತರಿಗೆ ಅರ್ಥಪೂರ್ಣವಾಗುತ್ತಿರಲಿಲ್ಲ.

ರಾಜಕೀಯ ಸ್ವರಾಜ್ಯಕ್ಕೆ ಸಾಮಾಜಿಕ ಸ್ವರಾಜ್ಯದ ಅರ್ಥ ಕೊಟ್ಟ ನಾಯಕ ಅಂಬೇಡ್ಕರ್ ಅವರ ವಿಶಿಷ್ಟ ಕೊಡುಗೆ ಇಲ್ಲಿಯೇ ಇದೆ. ಅವರು ರಾಷ್ಟ್ರವನ್ನು ಕೇವಲ ಭೌಗೋಳಿಕ ಪ್ರದೇಶವಾಗಿ ನೋಡಲಿಲ್ಲ. ಪರಸ್ಪರ ಸಮಾನ ನಾಗರಿಕರೆಂದು ಒಪ್ಪಿಕೊಳ್ಳದ ಜನರ ಗುಂಪು ರಾಜಕೀಯವಾಗಿ ಸ್ವತಂತ್ರವಾದ ಮಾತ್ರಕ್ಕೆ ಸಂಪೂರ್ಣ ಪ್ರಜಾಪ್ರಭುತ್ವ ರಾಷ್ಟ್ರವಾಗುವುದಿಲ್ಲ ಎಂಬುದು ಅವರ ಚಿಂತನೆಯ ಸಾರವಾಗಿತ್ತು.

ಆ ಕಾರಣಕ್ಕಾಗಿಯೇ ಅವರು:

ಮತದಾನದ ಹಕ್ಕಿಗಾಗಿ ಹೋರಾಡಿದರು;

ಸಾರ್ವಜನಿಕ ನೀರಿನ ಹಕ್ಕಿಗಾಗಿ ಸತ್ಯಾಗ್ರಹ ನಡೆಸಿದರು;

ಅಸ್ಪೃಶ್ಯತೆಯನ್ನು ಪ್ರಶ್ನಿಸಿದರು;

ಜಾತಿ ವ್ಯವಸ್ಥೆಯನ್ನೇ ನಿರ್ಮೂಲನೆ ಮಾಡಬೇಕೆಂದರು;

ದಲಿತರಿಗೆ ಸ್ವತಂತ್ರ ರಾಜಕೀಯ ಪ್ರತಿನಿಧಿತ್ವ ಕೇಳಿದರು;

ಕಾರ್ಮಿಕರು ಮತ್ತು ರೈತರ ಪ್ರಶ್ನೆಗಳನ್ನು ರಾಜಕೀಯಕ್ಕೆ ತಂದರು;

ಬಹುಮತದ ಅಧಿಕಾರಕ್ಕೆ ಸಂವಿಧಾನಾತ್ಮಕ ಮಿತಿಗಳು ಬೇಕೆಂದರು;

ಕೊನೆಗೆ ಸ್ವತಂತ್ರ ಭಾರತದ ನಾಗರಿಕರಿಗೆ ಮೂಲಭೂತ ಹಕ್ಕುಗಳನ್ನು ಖಾತರಿಪಡಿಸುವ ಸಂವಿಧಾನ ರೂಪಿಸುವಲ್ಲಿ ಕೇಂದ್ರ ಪಾತ್ರ ವಹಿಸಿದರು. ಅವರ ಈ ವಿಶಾಲ ಸಾಮಾಜಿಕರಾಜಕೀಯ ಪಯಣವನ್ನು ಸುಪ್ರೀಂ ಕೋರ್ಟ್ ಮತ್ತು ದಾಖಲೆಗಳು ವಿವರಿಸುತ್ತವೆ.

ಹೀಗಾಗಿ ಅಂಬೇಡ್ಕರ್ ಅವರ ಸ್ವಾತಂತ್ರ್ಯ ಹೋರಾಟದ ಪಾತ್ರವನ್ನು ಅರ್ಥಮಾಡಿಕೊಳ್ಳಲು ಒಂದು ವಾಕ್ಯ ಸಾಕಾಗಬಹುದು: ಏನೆಂದರೆ ಅವರು ಮುಖ್ಯವಾಗಿ ಬ್ರಿಟಿಷರಿಂದ ಭಾರತವನ್ನು ಮುಕ್ತಗೊಳಿಸುವ ಹೋರಾಟದ ನಾಯಕನಾಗಿರಲಿಲ್ಲ; ಅವರು ಸ್ವತಂತ್ರವಾಗಲಿದ್ದ ಭಾರತದಲ್ಲಿ ಮನುಷ್ಯನನ್ನು ಜಾತಿ, ಅಸ್ಪೃಶ್ಯತೆ, ಸಾಮಾಜಿಕ ಗುಲಾಮಗಿರಿ ಮತ್ತು ಬಹುಮತದ ದಬ್ಬಾಳಿಕೆಯಿಂದ ಮುಕ್ತಗೊಳಿಸುವ ಹೋರಾಟದ ಮಹತ್ವದ ನಾಯಕನಾಗಿದ್ದರು ಎಂಬುದು ಸ್ಪಷ್ಟ.

ಅಂಬೇಡ್ಕರ್‌ಗೆ 1947ರ ಆಗಸ್ಟ್ 15 ಅಂತಿಮ ಗುರಿಯಾಗಿರಲಿಲ್ಲ. ಅದು ಹೊಸ ಪ್ರಯಾಣದ ಆರಂಭವಾಗಿತ್ತು. ರಾಜಕೀಯ ಸ್ವಾತಂತ್ರ್ಯವನ್ನು ಸಾಮಾಜಿಕ ಮತ್ತು ಆರ್ಥಿಕ ಪ್ರಜಾಪ್ರಭುತ್ವವಾಗಿ ಪರಿವರ್ತಿಸುವುದೇ ಅವರ ದೃಷ್ಟಿಯಲ್ಲಿ ಸ್ವಾತಂತ್ರ್ಯದ ಪೂರ್ಣತೆಯಾಗಿತ್ತು. ಆ ಕಾರಣಕ್ಕಾಗಿಯೇ ಅಂಬೇಡ್ಕರ್ ಅವರನ್ನು ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಕಾಂಗ್ರೆಸ್ ನಾಯಕರ ಮಾದರಿಯಂತೆ ಅಳೆಯುವುದಕ್ಕಿಂತ, ಭಾರತೀಯ ಸ್ವಾತಂತ್ರ್ಯದ ಅರ್ಥವನ್ನೇ ವಿಸ್ತರಿಸಿದ ನಾಯಕ ಎಂದು ನೋಡುವುದು ಹೆಚ್ಚು ಸಮರ್ಪಕ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR